Resignation of his seat in the Assembly by Sri K. Chengalaraya Reddy.

Mr. SPEAKER.—I have to report to the House, as required by Rule 177, that Sri K. Chengalaraya Reddy has resigned his seat in the Assembly.

PANEL OF CHAIRMEN.

Mr. SPEAKER.—Under Rule 6 of the Rules of Procedure and Conduct of Business in the Mysore Legislative Assembly, the following Members will form the Panel of Chairmen .—

Sri A. Bheemappa Naik
,, V. M. Mascarenhas
,, Mulka Govinda Reddy and
,, D. Venkatesh.

—·—

Condolence *re*: Demise of two ex-Members.

(1) *The Late Sri S. C. Malliah.*

ಶ್ರೀ ಕೆ. ಹನುಮಂತಯ್ಯ (ಸಭಾನಾಯಕರು).—ಸ್ವಾಮಿ, ಈ ಸಭೆಯ ಪರವಾಗಿ ಎರಡು ಸಂತಾಪದ ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ತಮ್ಮ ಮತ್ತು ಈ ಸಭೆಯ ಅನುಮತಿಯನ್ನು ಕೇಳುತ್ತಿದ್ದೇನೆ. ಈ ಶಾಸನ ಸಭೆ ಹೊಸದಾಗಿ ರಾಜ್ಯಾಂಗ ರಚನೆಯ ಪ್ರಕಾರ ಸ್ಥಾಪನೆಯಾಗಿದ್ದರೂ ಕೂಡ ಮೈಸೂರು ದೇಶದಲ್ಲಿ ಪ್ರಜಾಪ್ರತಿನಿಧಿ ಸಭೆ (ಈ ಸಭೆಯೇ ಸ್ವಲ್ಪ ಹೆಸರು ಬದಲಾವಣೆಯಾದದ್ದಾಗಿ) ಈ ದೇಶದ ಆಗುಹೋಗುಗಳನ್ನು ಪರಿಶೀಲಿಸುತ್ತಿತ್ತು. ಆದ್ದರಿಂದ ಶಾಸನ ಸಭೆಯಲ್ಲಿ—ಈ ಸಭೆಯಲ್ಲೇ ಆಗಲಿ, ಅಥವಾ ಹಿಂದಿನ ಶಾಸನಸಭೆಗಳಲ್ಲೇ ಆಗಲಿ—ಸದಸ್ಯರಾಗಿದ್ದು ದೇಶ ಸೇವೆಮಾಡಿರತಕ್ಕಂಥವರ ವಿಷಯವನ್ನು ಪ್ರಸ್ತಾಪಿಸುವುದು ಸೂಕ್ತವಾಗಿದೆ. ಆ ರೀತಿಯಾಗಿ ಮಹತ್ತರವಾದ ದೇಶಸೇವೆಯನ್ನು ಮಾಡಿದ ಇಬ್ಬರು ಮಾಜಿ ಸದಸ್ಯರುಗಳು ದೈವಾಧೀನರಾಗಿದ್ದಾರೆ. ಮೊದಲು ಅವರಲ್ಲಿ ಒಬ್ಬರ ವಿಷಯವನ್ನು ಪ್ರಸ್ತಾಪಿಸಿ, ಅನಂತರ ಇನ್ನೊಬ್ಬರ ವಿಷಯ ತೆಗೆದುಕೊಳ್ಳತ್ತೇನೆ.

ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರು ಸುಮಾರು ಕಾಲು ಶತಮಾನಗಳವರೆಗೂ ಡಿಸ್ಟ್ರಿಕ್ಟ್ ಬೋರ್ಡ್, ಪ್ರಜಾಪ್ರತಿನಿಧಿಸಭೆ, ನ್ಯಾಯವಿಧಾಯಕಸಭೆ—ಈ ತೆರನಾಗಿ ಸ್ಥಳೀಯ ಸಂಸ್ಥೆಗಳಲ್ಲೂ ಮತ್ತು ಶಾಸನಸಭೆಗಳಲ್ಲೂ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಹಾಗೆಯೇ ಗ್ರಾಮಾಂತರಗಳಲ್ಲಿನ ನಮ್ಮ ಜನರಿಗೆ ಇನ್ನೂ ನಾನಾ ವಿಧದಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ರಾಜಕೀಯದಲ್ಲಿ ಬಹಳ ನುರಿತ, ಹೆಸರು ಪೆತ್ತ ಪ್ರಖ್ಯಾತ ವ್ಯಕ್ತಿಗಳಾಗಿದ್ದರು. ಮೈಸೂರು ದೇಶದ ಒಂದು ವೈಶಿಷ್ಟ್ಯವೆಂದರೆ—ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಅಲ್ಪಸ್ವಲ್ಪ ಇದ್ದಿದ್ದರೂ ಕೂಡ ಎಲ್ಲರೂ ಮಾಡುತ್ತಿರುವ ಕೆಲಸ ದೇಶಸೇವೆಯ ಕೆಲಸವೆಂದೂ, ಪರಸ್ಪರ ಸ್ನೇಹ, ಸೌಹಾರ್ದ, ಮಿತ್ರತ್ವ ಉಳಿಯಬೇಕು ಮತ್ತು ಬೆಳೆಯಬೇಕು ಎಂದೂ ಭಾವಿಸಿ ನಡೆದುಕೊಳ್ಳುವುದು. ಈ ಸತ್ಸಂಪ್ರದಾಯ ಸತತವಾಗಿ ಬೆಳೆದುಬಂದಿದೆ. ಶ್ರೀಮಾನ್ ಮಲ್ಲಯ್ಯನವರು ಇಂದು ಯಾವ ಪಕ್ಷ ಸರ್ಕಾರವನ್ನು ವಹಿಸಿಕೊಂಡಿದೆಯೋ ಆ ಪಕ್ಷಕ್ಕೆ ಪ್ರತಿಯಾದ ಪಕ್ಷಕ್ಕೆ ಸೇರಿದವರಾಗಿದ್ದರೂ ಮತ್ತು ಅನೇಕ ಸಂದರ್ಭಗಳಲ್ಲಿ ಅವರ ನೀತಿ ನಿಯಮಗಳನ್ನು ಒಪ್ಪದೆ ಇದ್ದರೂ, ಅವರ ನಿಸ್ಪೃಹತ್ವದಲ್ಲಿ, ಅವರ ದೇಶಸೇವಾ ನುನೋಮ್ಯತ್ತಿಯಲ್ಲಿ ಯಾವ ತರದ ರೋಪವನ್ನು ಕಂಡುಹಿಡಿಯುವುದಕ್ಕೂ ಅವಕಾಶವಿಲ್ಲ. ನಿಸ್ಪೃಹರಾಗಿ ಅವರು ದೇಶಸೇವೆಯನ್ನು ಸಲ್ಲಿಸಿದ್ದಾರೆ. ಇಂಥ ಒಬ್ಬ ದೊಡ್ಡ ವ್ಯಕ್ತಿಯನ್ನು ನಾವು ಈ ದಿವಸ ಕಳೆದುಕೊಂಡಿರುವುದರಿಂದ ನಮ್ಮ ರಾಜಕೀಯದಲ್ಲೇ ಒಂದು ದೊಡ್ಡ ಕೊರತೆಯು ಕಾಣುವ ಹಾಗಾಗಿದೆ.

ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಹೇಳಿ ನಾನು ಈ ಸಭೆಯ ಪರವಾಗಿ ಪ್ರಾರ್ಥನೆಮಾಡುತ್ತೇನೆ.

Sri J. MOHAMED IMAM (Jagalur).—Sir, I fully associate myself with the sentiments expressed by the Leader of the House and I offer on my behalf, on behalf of my party and on behalf of the entire House, my sincere condolences to the members of the bereaved family. It is our duty, we cannot but help expressing our profound sorrow at the passing away of Sri S. C. Malliah at a comparatively early age. I first came to know him in the year 1928 when both of us were colleages in the Representative Assembly. Since that time I knew intimately the services he had been rendering to the State and to the people of Mysore in one capacity or another. He was practically one of the leaders of the State and he was many a time instrumental in moulding the policies of the State. He had served as a member of the Legislative Assembly and he had served in more than one term as the President of the District Board. Not only in these capacities but also in various other capacities he had served the State, as mentioned by the Leader of the House, selflessly and without any selfish desire. So I again offer after my sincere condolences on behalf of the House to the members of the late Sri S. C. Malliah. Our heartfelt sympathies may be conveyed to them.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಸಭಾನಾಯಕರೂ ಮತ್ತು ಮಾನ್ಯ ಮಿತ್ರರಾದ ಶ್ರೀಮಾನ್ ಇಮಾಂರವರೂ ಹೇಳಿದ ಮಾತುಗಳನ್ನು ಅನುಮೋದಿಸುತ್ತಾ, ನಾನೂ ಎರಡು ಮಾತು

(ಶ್ರೀ ಎಚ್. ಕೆ. ವೀರಣ್ಣಗೌಡ)

ಗಳನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಶ್ರೀಮಾನ್ ಮಲ್ಲಯ್ಯನವರು ಸುಮಾರು ಕಳೆದ 20 ವರ್ಷಗಳಿಂದ ನನ್ನ ರಾಜಕೀಯ ಪ್ರತಿಸ್ಪರ್ಧಿಗಳಾಗಿದ್ದರು. ಅನೇಕ ಚುನಾವಣೆಗಳಲ್ಲಿ ನನಗೂ ಅವರಿಗೂ ಪೈಪೋಟಿ ಬೀಳುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಅವರು ಜಯಗಳಿಸುತ್ತಿದ್ದರು, ಕೆಲವು ಸಂದರ್ಭಗಳಲ್ಲಿ ನಾನು ಜಯಗಳಿಸುತ್ತಿದ್ದೆ. ಇಷ್ಟಾದರೂ ಶ್ರೀಮಾನ್ ಮಲ್ಲಯ್ಯನವರ ವಿಷಯದಲ್ಲಿ ಅತ್ಯಂತ ಗೌರವ ಮತ್ತು ಪ್ರೀತಿವಿಶ್ವಾಸಗಳು ನನಗಿತ್ತು ಎಂದು ಈ ಸಭೆಯ ಮುಂದೆ ಹೇಳಲಿಚ್ಛಿಸುತ್ತೇನೆ. ಶ್ರೀಯುತರು ನನ್ನ ಬಂಧುಗಳು ಮಾತ್ರವಲ್ಲದೆ, ಸ್ನೇಹಿತರೂ ಆಗಿದ್ದರು. ಸಾಮಾನ್ಯವಾಗಿ ಒಬ್ಬ ಮನುಷ್ಯ ಹುಟ್ಟಿದ ನೆಲೆಯ ಅವನು ಸಾಯುವುದರೊಳಗಾಗಿ ತನ್ನ ಊರು, ತನ್ನ ತಾಲ್ಲೂಕು, ತನ್ನ ದೇಶ—ಇವುಗಳನ್ನು ತಾನು ಕಂಡದ್ದಕ್ಕಿಂತಲೂ ಒಂದು ಹೆಜ್ಜೆಯಷ್ಟಾದರೂ ಮುಂದಕ್ಕೆ ತಂದು ಅಭಿವೃದ್ಧಿಪಡಿಸಿದರೆ ಆತನ ಜನ್ಮ ಸಾರ್ಥಕವಾಯಿತೆಂದು ದೊಡ್ಡವರು ಹೇಳಿದ್ದಾರೆ. ಶ್ರೀಮಾನ್ ಮಲ್ಲಯ್ಯನವರ ವಿಚಾರದಲ್ಲಿ ಆ ಮಾತುಗಳು ಅಕ್ಷರಶಃ ನಿಜವೆಂದು ಹೇಳಬಹುದು. ಅವರು ಹುಟ್ಟಿದ ಸೋಮನ ಹಳ್ಳಿಯೆಂಬ ಸಣ್ಣ ಊರಿನ ಹೆಸರನ್ನು ಸಂಸ್ಥಾನದ ರೆಲ್ಲೆಲ್ಲಾ ಬೆಳಗುವಂತೆ ಅವರು ಮಾಡಿದ್ದಾರೆ. ತಾಲ್ಲೂಕಿನವರಿಗೆ ಅವರು ಮಹದುಪಕಾರಮಾಡಿದ್ದಾರೆ. ಹಾಗೂ ಷಿಂಷಾ ನದಿಯ ಎಡಭಾಗದ ಪ್ರದೇಶದ ಜನರಿಗೆ ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರ ಪ್ರಯತ್ನದಿಂದ ಆಗಿರುವ ಉಪಕಾರವನ್ನು ಅಲ್ಲಿನ ಜನರು ತಲೆತಲಾಂತರದವರೆಗೂ ನೆನೆಸಿಕೊಳ್ಳುವಂಥವಾಗಿದೆ. ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿಯೂ ಮತ್ತು ಬೇರೆ ಏಥೆವಾದ ಪ್ರಾತಿನಿಧ್ಯಹೊಂದಿದವರಾಗಿಯೂ ಜವಾಬ್ದಾರಿ ಸ್ಥಾನಗಳನ್ನು ಅವರು ವಹಿಸಿದ್ದಾಗ ಅವರು ಅನೇಕ ರೀತಿಯಲ್ಲಿ ಜನರಿಗೆ ಸಹಾಯಮಾಡಿದ್ದಾರೆ. ವಿಶ್ವೇಶ್ವರಯ್ಯ ನಾಲಾ, ಕನ್ನಂಬಾಡಿ ಕಟ್ಟೆ ಕೆಳಗಿನ ರೈತರಿಗೆ ಬಹಳಮಟ್ಟಿನ ಸೇವೆ ಸಲ್ಲಿಸಿದ್ದಾರೆ.

ಅದೇ ರೀತಿ, ಸಂಸ್ಥಾನಕ್ಕೂ ಕೂಡ ಸೇವೆ ಸಲ್ಲಿಸಿದ್ದಾರೆಂದರೆ ಅದು ಅತಿಶಯೋಕ್ತಿಯಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಹಳ್ಳಿಗಾಡಿನವರ ಸೌಕರ್ಯಕ್ಕಾಗಿ, ಅವರ ವಿದ್ಯಾಭ್ಯಾಸಕ್ಕೆ ನ್ಯೂಲು ಮಂತಾದುವುಗಳನ್ನು ಒದಗಿಸುವುದಕ್ಕಾಗಿ ಅವರು ಹಿಂದಿನ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಸರ್ಕಾರದವರೊಡನೆ ಹೋರಾಟ ಮಾಡಿ ಜನ ಸಾಮಾನ್ಯರಿಗೂ ಹಳ್ಳಿಗಾಡಿನವರಿಗೂ ಉಪಕಾರ ಮಾಡಿದ್ದಾರೆ. ದೇಶದ ಗಣ್ಯ ಪ್ರಜೆಯಾಗಿ ಪ್ರಮುಖ ಮುಖಂಡರಾಗಿ ಮತ್ತು ಜನರ ನಿಜವಾದ ಪ್ರತಿನಿಧಿಯೆನಿಸಿಕೊಂಡು ದೇಶ ಸೇವೆ ಮಾಡಿದಂಥ ಅವರು ಕಾಲಾಧೀನರಾದುದು ನಮಗೆ ಸಂತಾಪವನ್ನುಂಟುಮಾಡುತ್ತದೆ. ಆದ್ದರಿಂದ ಸಭಾ ನಾಯಕರೂ ಮತ್ತು ಶ್ರೀಮಾನ್ ಇಮಾಂರವರೂ ಹೇಳಿದ ಅಂಶಗಳನ್ನೇ ಅನುಮೋದಿಸುತ್ತಾ, ಈ ಸಭೆಯ ಪರವಾಗಿ ಸಂತಾಪವನ್ನು ಅವರ ಸಂಸಾರದವರಿಗೆ ತಿಳಿಸಬೇಕೆಂದು ಆಶಿಸುತ್ತೇನೆ.

*ಶ್ರೀ ಎಂ. ಶಂಕರಲಿಂಗೇಗೌಡ (ನಾಗಮಂಗಲ).—ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರ ವಿಚಾರವಾಗಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಹನುಮಂತಯ್ಯನವರು ಮತ್ತು ವಿರೋಧ ಪಕ್ಷದ ನಾಯಕರಾದ ಇಮಾಂರವರೂ ಮತ್ತು ಇತರರೂ ಅವರು ಮಾಡಿದಂಥ ಕೆಲಸಗಳನ್ನು ವಿವರಿಸಿದರು. ಮತ್ತು ಶ್ರೀಮಾನ್ ವೀರಣ್ಣಗೌಡರು ಆ ತಾಲ್ಲೂಕಿಗೆ ಅವರು ಎಷ್ಟರ ಮಟ್ಟಿಗೆ ಉಪಕಾರಮಾಡಿದ್ದಾರೆಂಬುದನ್ನು ಬಹಳ ಚೆನ್ನಾಗಿ ವಿವರಿಸಿದರು. ಮುಖ್ಯವಾಗಿ ಮನುಷ್ಯನ ಯೋಗ್ಯತೆ ಅವನು ಸತ್ತಾಗಲೇ ಗೊತ್ತಾಗುವುದು! ಪಾಪಿ ಸತ್ತರೆ ಒಂದು ತೃಣಕೂ ಅತ್ತಕಡೆ ನೋಡುವುದಿಲ್ಲ. ಅದೇ ನೋಡಿ! ಮೊನ್ನೆ ದಿವಸ ನಾವು ಅಲ್ಲಿ ಹೋಗಿದ್ದಾಗ ಕೂತುಕೊಳ್ಳುವುದಕ್ಕೂ ಜಾಗವಿಲ್ಲದ ಹಾಗೆ ಜನ ಕಿಕ್ಕಿರಿದಿತ್ತು. ಅಷ್ಟು ಜನ ಸೇರಿದ್ದರು. ಕಂಟ್ರೋಲ್ ಇದ್ದರೆ ಅಷ್ಟು ಜನಕ್ಕೂ ಅನ್ನಹಾಕುವುದಕ್ಕಾಗುತ್ತಿರಲಿಲ್ಲ. ಸುಮಾರು ಇಪ್ಪತ್ತು ಪಲ್ಲೆ ಅಡಿಗೆ ಮಾಡಿದ್ದರು. 8000 ಜನಕ್ಕೆ ಕಡಮೆ ಇಲ್ಲದೆ ರಾತ್ರಿ ಎಂಟು ಗಂಟೆಯವರೆಗೂ ಊಟ ಮಾಡಿಕೊಂಡು ಹೋದರು. ನಾವೂ ಅವರಂತೆಯೇ ಸೇವೆ ಮಾಡಿ ಸತ್ತ ಕಾಲದಲ್ಲಿ ಅಷ್ಟು ಜನರು ಸೇರಿದರೆ ನಾವು ಸಂಬಳ ತಗೆದುಕೊಂಡದ್ದು ಸಾರ್ಥಕವಾಯಿತೆನ್ನಬಹುದು; ಇಲ್ಲದಿದ್ದರೆ ಸುಮ್ಮನೆ ಸರ್ಕಾರದ ಸಂಬಳದ ಹಣ ತೆಗೆದುಕೊಂಡು ತಿಂದುಬಿಟ್ಟರು ಎನ್ನಬೇಕಾಗುತ್ತದೆ. ಆದ್ದರಿಂದ ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರು ಮಾಡಿದಂಥ ಕಾರ್ಯಗಳನ್ನು ನಾವು ಒಳ್ಳೆಯ ಹೆಸರನ್ನು ಗಳಿಸಲೆಂದು ಎಲ್ಲರಿಗೂ ಹೇಳಿ, ಶ್ರೀಯುತರ ಆತ್ಮಕ್ಕೆ ಸೌಖ್ಯವುಂಟಾಗಲಿ ಎಂದು ದೇವರನ್ನು ಪ್ರಾರ್ಥನೆಮಾಡುತ್ತಾ, ನಾನು ಮುಗಿಸುತ್ತೇನೆ.

ಶ್ರೀ ಟಿ. ಮರಿಯಪ್ಪ (ಮೈಸೂರು).—ಮಾನ್ಯ ಅಧ್ಯಕ್ಷರೇ, ಸಭಾ ನಾಯಕರು ಮತ್ತು ಇತರ ಮಾನ್ಯ ಸದಸ್ಯರು ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರ ನಿಧನದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ, ಅವರ ಗುಣಗಾನ ಮಾಡಿದ್ದಾರೆ. ಶ್ರೀಯುತರು ರಾಜಕೀಯ ಕ್ಷೇತ್ರದಲ್ಲಿ ವಿಶೇಷವಾದ ಸೇವೆ ಸಲ್ಲಿಸಿದ್ದಾರೆ. ಒಂದಾನೊಂದು ಕಾಲದಲ್ಲಿ ಅವರೂ ನಾವೂ ಒಂದೇ ಪಾರ್ಟಿಯಲ್ಲಿ ಕೆಲಸ ಮಾಡುತ್ತಿದ್ದು, ಭಿನ್ನಾಭಿಪ್ರಾಯಗಳು ಬಂದು ಅವರು ವಿರೋಧ ಪಕ್ಷದಲ್ಲಿದ್ದರೂ ಕೂಡ, ಅವರು ಮಾಡುತ್ತಿದ್ದ ಭಾಷಣವನ್ನು ಈ ಸಭೆಯವರು ಅವರೋಕಿಸಿದರೆ ಅದೆಷ್ಟು ಗಾಂಭೀರ್ಯದಿಂದ ಕೂಡಿತ್ತೆಂಬುದು ವ್ಯಕ್ತಪಡುತ್ತದೆ. ಸಾಮಾನ್ಯವಾಗಿ ಸಾರ್ವಜನಿಕ ಕೆಲಸಗಳಲ್ಲಿ ಅವರು ಹೆಚ್ಚಿನ ಆಸಕ್ತಿಯಿಂದ ಸೇವೆ ಸಲ್ಲಿಸಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಗೊತ್ತೇ ಇದೆ. ಬಾಕಿ ಜನಾಂಗದ ಅಭಿವೃದ್ಧಿಯ ವಿಚಾರದಲ್ಲಿಯೂ ಅವರು ವಿಶೇಷವಾಗಿ ದುಡಿದಿದ್ದಾರೆ. ಹೀಗೆ ಸಾಮಾಜಿಕ ಮತ್ತು ರಾಜಕೀಯ—ಎರಡು ಕ್ಷೇತ್ರಗಳಲ್ಲೂ ಅವರ ಸೇವೆಯನ್ನು ಎಲ್ಲರೂ ಸ್ಮರಿಸಿಕೊಳ್ಳುವಂತಿದೆಯೆಂದು ಹೇಳಿ ಮಾನ್ಯ ಸಭಾನಾಯಕರು ಸಭೆಯು ಮುಂದಿಟ್ಟಿರುವ ನಿರ್ಣಯವನ್ನು ಸಮರ್ಥಿಸುತ್ತೇನೆ.

ಅಧ್ಯಕ್ಷರು.—ಈ ಸಭೆಯ ಸದಸ್ಯರಾಗಿದ್ದ ಶ್ರೀ ಎಸ್. ಸಿ. ಮಲ್ಲಯ್ಯನವರು ಕಳೆದ ಕಾಲು ಶತಮಾನಗಳಿಂದಲೂ ರಾಜಕೀಯ ರಂಗ, ಶಾಸನ ಸಭೆಗಳು ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಒಂದೇ ಸಮನೆ ದುಡಿದು ಮೈಸೂರು ಜನಾಂಗದಲ್ಲಿ ಪ್ರಖ್ಯಾತರಾಗಿದ್ದರು. ಶಾಸನ ಸಭೆಗಳ ವತ್ತು ಸ್ಥಳೀಯ ಸಂಸ್ಥೆಗಳ ಮೂಲಕ ಸಂಸ್ಥಾನದ ಮತ್ತು ಜನತೆಯ ಸೇವೆಯನ್ನು ಎಷ್ಟು ಕಷ್ಟಗಳು ಬಂದಾಗ್ಯೂ ಹೆದರದೆ ನಿರ್ಭಯವಾದ ಮನಸ್ಸಿನಿಂದ ಮಾಡಿದ್ದಾರೆಂಬುದು ಜನ ಜನಿತವಾಗಿದೆ. ಅದರಲ್ಲೂ ಸಂಸ್ಥಾನದಲ್ಲೆ ಅತ್ಯಧಿಕವಾಗಿ ಜನರು ವಾಸವಾಗಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಅವರು ವಿಶೇಷ ಆಸಕ್ತಿಯುಳ್ಳವರಾಗಿದ್ದರು ಎಂಬುದೆ ಎಲ್ಲರಿಗೂ ತಿಳಿದಂಥ ವಿಷಯವಾಗಿದೆ. ಇಂಥ ಒಬ್ಬ ಮಹನೀಯರ ಅಕಾಲ ನಿಧನಕ್ಕಾಗಿ ಈ ಸಭೆಯು ತನ್ನ ಅನುತಾಪವನ್ನು ವ್ಯಕ್ತಪಡಿಸುತ್ತದೆ. ಈ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ.

ಈ ಸಂದರ್ಭದಲ್ಲಿ ಮೃತರ ಆತ್ಮಕ್ಕೆ ಗೌರವವನ್ನು ಸೂಚಿಸಲು ಸಭೆಯು ಎದ್ದು ನಿಂತು ಎರಡು ನಿಮಿಷ ಕಾಲ ಮೌನದಿಂದಿರಬೇಕೆಂದು ಸೂಚಿಸುತ್ತೇನೆ.

(ಸದಸ್ಯರೆಲ್ಲರೂ ಎದ್ದು ನಿಂತು, ಎರಡು ನಿಮಿಷಗಳ ಕಾಲ ಮೌನದಿಂದಿದ್ದು, ದಿವಂಗತರ ಆತ್ಮಕ್ಕೆ ಗೌರವವನ್ನು ಸೂಚಿಸಿದರು.)

(2) The Late Sri Devarakondappa.

ಶ್ರೀ ಕೆ. ಹನುಮಂತಯ್ಯ.—ನಾನು ಸೂಚಿಸುವ ಎರಡನೆಯ ಸಂತಾಪಸೂಚಕ ವಿಷಯವು ಶ್ರೀಮಾನ್ ದೇವರಕೊಂಡಪ್ಪನವರ ಮರಣಕ್ಕೆ ಸಂಬಂಧಪಟ್ಟುದು. ಸ್ವಾಮಿ, ಶ್ರೀಮಾನ್ ದೇವರ ಕೊಂಡಪ್ಪನವರು ದೈವಾಧೀನರಾಗಿ ಸುಮಾರು ಮೂರು ತಿಂಗಳಾಗುತ್ತಾ ಬಂದಿತು. ಶ್ರೀಮಾನ್ ದೇವರಕೊಂಡಪ್ಪನವರು ಅನೇಕಲ್ ಊರಿನ ಪೌರಸಭೆಗೆ ಅನೇಕಾವರ್ತಿ ಸದಸ್ಯರೂ, ಉಪಾಧ್ಯಕ್ಷರೂ ಮತ್ತು ಅಧ್ಯಕ್ಷರೂ ಆಗಿ ಆ ಊರಿಗೆ ಸೇವೆಯನ್ನು ಸಲ್ಲಿಸಿದರು. ಅವರ ಕಾರ್ಯ ಕ್ಷೇತ್ರ ಅಷ್ಟೇ ಆಗಿರಲಿಲ್ಲ. ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಅವರ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಯಾರೂ ಮರೆಯುವಂತಿಲ್ಲ. ಅವರ ಧೈರ್ಯ, ಅವರ ಉತ್ಸಾಹ ಮತ್ತು ದೇಶಭಕ್ತಿ ಮತ್ತೊಬ್ಬರಲ್ಲಿ ಅವಕ್ಕಿಂತಲೂ ಮಿಗಿರಾಗಿ ಕಾಣುವುದು ಅಪೂರ್ವ. ಶಾಸನ ಸಭೆ ಮತ್ತು ಪೌರಸಭೆಗಳಲ್ಲದೆ ಇವೆಲ್ಲಕ್ಕೂ ಮಿಗಿಲಾದ ಸೇವೆಯನ್ನು ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಲ್ಲಿಸಿದ್ದಾರೆ. ಈ ದಿವಸ ಈ ಶಾಸನ ಸಭೆಯಲ್ಲಿ ನಾವು ಕುಳಿತು ದೇಶದ ಆಗುಹೋಗುಗಳ ಸಂಪೂರ್ಣ ಸೂತ್ರವನ್ನು ಹಿಡಿದ್ದೇವೆ; ಈ ಪರಿಸ್ಥಿತಿಯನ್ನು ಉಂಟುಮಾಡಲು ಸಹಸ್ರಾರು ಮಂದಿ ಕಷ್ಟಪಟ್ಟಿದ್ದಾರೆ, ನಷ್ಟಪಟ್ಟಿದ್ದಾರೆ ಮತ್ತು ಪ್ರಾಣ ಕೊಟ್ಟಿದ್ದಾರೆ. ಈ ಎಲ್ಲವಾದ ದೇಶಭಕ್ತರಲ್ಲಿ ಶ್ರೀ ದೇವರಕೊಂಡಪ್ಪನವರು ಅಗ್ರಗಣ್ಯರು. ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕಾವರ್ತಿ ಕಾರಾಗೃಹ ವಾಸವನ್ನು ದಿಟ್ಟತನದಿಂದ ಅನುಭವಿಸಿದರು. ಒಂದೆರಡು ಸಾರಿ ಸಂಗ್ರಾಮದ ಪರಿಣಾಮವಾಗಿ ಅವರು ರಾತ್ರಿ ಬಿಟ್ಟು ತಿನ್ನಬೇಕಾಯಿತು. ಅವರು ಸಾಮುಮಾಡಿ ಕುಸ್ತಿಯಲ್ಲಿ ಕೂಡ ಗೆದ್ದಿರತಕ್ಕಂಥವರು ಸಿಂಹದಂಥ ಮನುಷ್ಯರು. ಏಟುಬಿದ್ದಾಗ್ಗೂ ಕೂಡ ಶಾಂತಿ ಸಹನೆಯಿಂದ ವರ್ತಿಸಿಕೊಂಡು, ಅಹಿಂಸಾ ತತ್ವವನ್ನು ಪಾಲಿಸಿಕೊಂಡು ಹೋಗುವ ದೊಡ್ಡ ಮನಸ್ಸು ಅವರದ್ದಾಗಿದ್ದಿತು ಎಂಬುದು ಎಲ್ಲರಿಗೂ ಗೊತ್ತಿದೆ. ಮನುಷ್ಯನ ದೊಡ್ಡಸ್ತಿಕೆಯನ್ನು ನಾವು ಪರೀಕ್ಷಿಸಬೇಕಾದರೆ ಆತನ ಸಾವೇ ಒಂದು ನಿದರ್ಶನ ಎಂದು ನಾವು ನಂಬಿಕೊಂಡಿದ್ದೇವೆ. ಅವರು ದೇವಸ್ಥಾನಕ್ಕೆ ಹೋಗಿ ದೇವರ ಪೂಜೆ ಮುಗಿಸಿಕೊಂಡು ಹೊರಗೆ ಬಂದ ತಕ್ಷಣ ಪ್ರಾಣಬಿಟ್ಟರು ಎಂದು ನಾನು ಕೇಳಿದ್ದೇನೆ. ಅಂಥ ಸತ್ಪುರುಷರನ್ನೂ ಉಜ್ವಲದೇಶಭಕ್ತರನ್ನೂ ಕಳೆದುಕೊಂಡೆವೆಂದು ನನಗೆ ವ್ಯಸನವಾಗುತ್ತದೆ. ಅವರು ನನ್ನ ಸಹೋದ್ಯೋಗಿಗಳಾಗಿ ಕೆಲಸ ಮಾಡಿದ್ದರು. ಯಾವ ಸ್ಫೂರ್ತಿಯಿಂದ ನಾವುಗಳು ಎಲ್ಲರೂ ಈ ದಿವಸ ಕೆಲಸಮಾಡುತ್ತಿದ್ದೇವೆಯೋ, ಆ ಸ್ಫೂರ್ತಿಯನ್ನು ಮತ್ತೊಬ್ಬರಿಗೆ ಕೊಡತಕ್ಕ ಶಕ್ತಿ ದೇವರಕೊಂಡಪ್ಪನವರಿಗೆ ಇತ್ತು. ಅವರ ನಾದ ಸಿಂಹನಾದ, ಅವರ ಕೆಚ್ಚೆದೆ ಸಿಂಹದ ಎದೆ ಆಗಿತ್ತು. ಅವರದು ನಿಸ್ವಾರ್ಥ ಸೇವೆ. ಅವರ ಮನೆಗೆ ಹೋಗಿ ನೋಡಿದರೂ ಕೂಡ, ಬಡತನ ಬೀಡುಮಾಡಿಕೊಂಡಿರುವ ಹಾಗೆ ಕಾಣುತ್ತಿತ್ತು. ಅಂಥ ಮಹನೀಯರನ್ನು ನಾವು ಕಳೆದುಕೊಂಡು ದುಃಖಕ್ಕೆ ಈಡಾಗಿರುವುದು ಆಶ್ಚರ್ಯವಲ್ಲ. ದೇವರು ಅವರ ಆತ್ಮಕ್ಕೆ ಸದ್ಗತಿಯನ್ನು ಕೊಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಜನಾಬ್ ಜೆ. ಮಹಮ್ಮದ್ ಇಮಾಂ.—ಸಭಾನಾಯಕರು ದಿವಂಗತ ಶ್ರೀ ದೇವರಕೊಂಡಪ್ಪನವರ ವಿಷಯವಾಗಿ ಹೇಳಿರುವ ಎಲ್ಲಾ ಅಂಶಗಳನ್ನೂ ಪುಷ್ಟೀಕರಿಸುತ್ತಾ, ಈ ಸಭೆಯಪರವಾಗಿ ನನ್ನ ದುಃಖವನ್ನು ಸೂಚಿಸುತ್ತೇನೆ. ಶ್ರೀಮಾನ್ ದೇವರಕೊಂಡಪ್ಪನವರೂ ಮತ್ತು ನಾನೂ ಒಂದೇ ಪಾರ್ಟಿಗೆ ಸೇರದೆ ಇದ್ದರೂ, ಅವರು ನಾನು ಅಧಿಕಾರದಲ್ಲಿದ್ದಾಗ, ನನ್ನಲ್ಲಿ ಬಹಳ ವಿಶ್ವಾಸವಿಟ್ಟು, ಅವರ ತಾಲ್ಲೂಕಿನ ಸೇವೆಮಾಡುವ ಉದ್ದೇಶದಿಂದ ಯಾವಾಗಲೂ ನನ್ನಲ್ಲಿ ಬರುತ್ತಿದ್ದರು. ಅವರು ಬೇರೆ ಪಾರ್ಟಿಗೆ ಸೇರಿದ್ದರೂ ಸಹ, ಅವರಿಗೆ ರಾಜಕೀಯದಲ್ಲಿ ಇದ್ದಂಥ ಆಸಕ್ತಿ, ಸೇವೆಮಾಡಲು ಅವರಿಗೆ ಇದ್ದ ಆಕಾಂಕ್ಷೆ, ಇವನ್ನೆಲ್ಲಾ ನೋಡಿ, ಅವರ ಮೇಲೆ ನನಗೆ ಬಹಳ ಅಭಿಮಾನವಿದ್ದಿತು. ಎಲ್ಲದಕ್ಕಿಂತಲೂ ಹೆಚ್ಚಾಗಿ, ಅವರ ಗರ್ಜನೆ, ಅವರ ವಾಣಿ, ಇವನ್ನು ಯಾರೂ ಮಿಂಚಿಸುವ ಹಾಗಿರಲಿಲ್ಲ. ಅವರು ಯಾವಾಗಲೂ ದೊಡ್ಡ ಧ್ವನಿಯಿಂದ ಬೇಕಾದಷ್ಟು ವಿಷಯಗಳನ್ನು ಹೇಳುತ್ತಿದ್ದರು. ನಾನು ಹಾಸ್ಯಕ್ಕಾಗಿ "ದೇವರಕೊಂಡಪ್ಪನವರೇ ನೀವು ದೇವರನ್ನೇ ಕೊಂಡುಬಿಟ್ಟಿದ್ದೀರಿ, ಇವೆಲ್ಲಾ ನಿಮಗೆ ಯಾತಕ್ಕೆ, ದೇವರೇ ನಿಮಗೆ ಸಹಾಯ ಮಾಡುತಾರೆ." ಎಂದು ಹೇಳುತ್ತಿದ್ದೆ. ಅವರು ರಾಜಕೀಯದಲ್ಲಿಯೂ ಅವರ ತಾಲ್ಲೂಕಿಗೂ ಮತ್ತು ದೇಶಕ್ಕೂ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಅಕಾಲ ನಿಧನದಿಂದ ನಮಗೆಲ್ಲರಿಗೂ ಬಹಳ ದುಃಖವಾಗಿದೆ. ನಾನು ದೇವರಕೊಂಡಪ್ಪನವರ ಬಂಧುವರ್ಗದವರಿಗೆ ನನ್ನ ಅನುತಾಪವನ್ನು ಬಹಳ ದುಃಖದಿಂದ ಸೂಚಿಸುತ್ತೇನೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಹೊಸಕೋಟೆ. ಅನೆಕಲ್).—ಸ್ವಾಮಿ, ಸಭಾನಾಯಕರು ಮತ್ತು ಪ್ರತಿಪಕ್ಷದ ನಾಯಕರು ಕೀರ್ತಿಶೇಷ ದೇವರಕೊಂಡಪ್ಪನವರ ಬಗ್ಗೆ ಆಡಿದ ಪ್ರಶಂಸೆಯನ್ನು ನಾನು ಅನುಮೋದಿಸುತ್ತೇನೆ. ಅನೆಕಲ್ಲು ತಾಲ್ಲೂಕಿನಲ್ಲಿ ವೀರಕೆಚ್ಚೆದೆಯಗಂಡಾ ಳೆಂದರೆ ದೇವರಕೊಂಡಪ್ಪನವರು. ಅವರ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಪ್ರಜಾಪ್ರತಿನಿಧಿ ಸಭೆಯಲ್ಲಿ ಸಾಮಾನ್ಯ ರೈತರ ಬಗ್ಗೆ, ಕೂಲಿ ಕಾರ್ಮಿಕರ ಬಗ್ಗೆ, ಅದರಲ್ಲಿಯೂ ವಿಶೇಷವಾಗಿ ಕೈಮಗ್ಗದವರ ಬಗ್ಗೆ ಇರುವ ಎಲ್ಲಾ ಕುಂದುಕೊರತೆಗಳನ್ನೂ ಸಿಂಹವಾಣಿಯಿಂದ ಮಂಡಿಸುತ್ತಿದ್ದರು. ಅವರ ಭಾಷಣ ಮತ್ತು ಅವರ ಧ್ವನಿಯ ಘರ್ಜರಿಯಿಂದ ಪ್ರತಿಯೊಬ್ಬರೂ ಅವರ ವಾದವನ್ನು ಒಪ್ಪುವಂತೆ ಮಾಡುತ್ತಿದ್ದರು. ಅಂಥವರನ್ನು ಆ ಊರಿನವರು ಕಳೆದುಕೊಂಡಿರುವುದು ನಿಜವಾಗಿಯೂ ಅವರ ದೊಡ್ಡ ದಾರ್ಭಾಗ್ಯವೇ ಸರಿ. ಅವರ ಶವ ಸಂಸ್ಕಾರದ ದಿನ ನಾನು ಅಲ್ಲಿ ಹಾಜರಿದ್ದೆ, ಒಂದು ಒಂದೂವರೆ ಮೈಲಿಯವರೆಗೂ ದೇವರಕೊಂಡಪ್ಪನವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಜನರು ನೆರೆದಿದ್ದರು. ಸಾಮಾನ್ಯ ರೈತನ ಕುಟುಂಬದಲ್ಲಿ ಜನಿಸಿದ ದೇವರಕೊಂಡಪ್ಪನವರ ಹಿಂದೆ ಅನೇಕಲ್ಲು ತಾಲ್ಲೂಕಿನ ಎಲ್ಲಾ ಜನರೂ ಗಂಡಸರೂ, ಹೆಂಗಸರೂ ಮತ್ತು ಮಕ್ಕಳೂ ಆದಿಯಾಗಿ ಕಣ್ಣೀರು ಸುರಿಸುತ್ತಾ ಬಂದು ಗೋಳಿಡುತ್ತಿದ್ದರು. ಅವರ ನಿಧನದಿಂದ ಕೈಮಗ್ಗದವರಿಗೆ ವಿಶೇಷವಾದ ಮತ್ತು ಅಪಾರವಾದ ನಷ್ಟ ಉಂಟಾಗಿದೆ. ಈ ಸಂದರ್ಭದಲ್ಲಿ ದೇವರಕೊಂಡಪ್ಪನವರ ಆತ್ಮಕ್ಕೆ ದೇವರು ಶಾಂತಿಯನ್ನು ಉಂಟುಮಾಡಲೆಂದೂ, ಅವರ ಕುಟುಂಬ ವರ್ಗದವರಿಗೆ ಈ ಅಪಾರವಾದ ದುಃಖವನ್ನು ಸಹಿಸುವ

(ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ).

ಶಕ್ತಿಯನ್ನು ಭಗವಂತನು ಕರುಣಿಸಲೆಂದೂ ನಾನು ನನ್ನ ಅನುತಾಪವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಶ್ರೀ ದೇವರ ಕೊಂಡಪ್ಪನವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇವೆ ಮಾಡಿರುವುದನ್ನು ಸಭಾನಾಯಕರು ಆವಾಗಲೇ ತಿಳಿಸಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನತೆ ಭಾಗವಹಿಸಿದ್ದ ಕಾಲಕ್ಕೆ ಕಾಂಗ್ರೆಸ್ ಬಹಳ ಶಕ್ತಿಯುತವಾಗಿತ್ತು ಎಂದು ಹೇಳಬಹುದು. ಆ ಕಾಲದಲ್ಲಿ ದೇವರ ಕೊಂಡಪ್ಪನವರಂಥ ರಾಷ್ಟ್ರಭಕ್ತರು ಮಾತ್ರವಲ್ಲದೆ ಇನ್ನೂ ಎಷ್ಟೋ ಜನ ಭಾಗವಹಿಸಿದ್ದರು. ಆದರೆ ಕಾಂಗ್ರೆಸ್ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗ ದೇವರ ಕೊಂಡಪ್ಪನವರು ಸಲ್ಲಿಸಿದ ದೇಶಸೇವೆಯ ವಿಷಯವಾಗಿ ಒಂದು ಅಂಶವನ್ನು ಹೇಳುತ್ತೇನೆ. 1937ನೇ ಇಸವಿಯಲ್ಲಿ ಕಾಂಗ್ರೆಸ್ ಪ್ರಚಾರಕ್ಕಾಗಿ ನೇಮಕವಾಗಿದ್ದ ನಾನು ಸಂಸ್ಥಾನಾಮಳೆ ಎಲ್ಲ ತಾಲ್ಲೂಕುಗಳಲ್ಲೂ ಸಂಚರಿಸಿ ಪ್ರತಿ ತಾಲ್ಲೂಕಿನ ಅನೇಕ ಹಳ್ಳಿಗಳಿಗೂ ಹೋಗಿ ಕಾಂಗ್ರೆಸ್ ಪ್ರಚಾರ ಮಾಡಿದೆ. ಆ ಕಾಲದಲ್ಲಿ ಅನೇಕ ಪಟ್ಟಣಗಳಲ್ಲಿಯೂ ಸಹ, ಹಳ್ಳಿಗಳಲ್ಲಿ ಮಾತ್ರವೇ ಅಲ್ಲ, ಕಾಂಗ್ರೆಸ್ ಸಭೆಗೆ ಬರಬೇಕೆಂದರೆ, ಜನ ಬಹಳ ಹೆದರುತ್ತಿದ್ದರು. ಆಗಿನ ಸರ್ಕಾರದ ಭಯದಿಂದ, ಕಾಂಗ್ರೆಸ್ ಸಭೆಗೆ ಬರುವುದಕ್ಕಾಗಲಿ, ಕಾಂಗ್ರೆಸ್‌ನವರ ಮಾತಿಗೆ ಬೆರೆಕೊಡುವುದಕ್ಕಾಗಲಿ ಜನರಲ್ಲಿ ಧೈರ್ಯವಿರುತ್ತಿರಲಿಲ್ಲ. ಒಂದು ಪ್ರಸಂಗ ಅನೇಕಲ್ಲು ತಾಲ್ಲೂಕಿಗೆ ಹೋದಾಗ ನಡೆಯಿತು. ನಾನು ಅನೇಕಲ್ಲಿನಲ್ಲಿ ಸಭೆ ಏರ್ಪಾಡು ಮಾಡಬೇಕೆಂದು ಹಸ್ತಪತ್ರಿಕೆಗಳನ್ನು ಹಂಚಿ ಹೋದರೆ, ಆ ಊರಿನ ಮುಂದೆ, ನನಗಾಗಿ ಕಾದಿದ್ದವರು ದೇವರಕೊಂಡಪ್ಪನವರೊಬ್ಬರೇ. ನಾನು ಮತ್ತು ನನ್ನ ಜೊತೆಯಲ್ಲಿದ್ದವರು, ಅಷ್ಟೇ ಜನ ಹೊರತು ಇನ್ನೊಬ್ಬರೂ ಭಾಷಣ ಕೇಳುವುದಕ್ಕೆ ಬಂದಿರಲಿಲ್ಲ. ಯಾರನ್ನು ಕುರಿತು ಭಾಷಣಮಾಡಬೇಕು ಎಂದು ನನಗೆ ಪೆಚ್ಚು ಆಯಿತು. ದೇವರ ಕೊಂಡಪ್ಪನವರು ನನ್ನನ್ನು ಕರೆದುಕೊಂಡು ಜೈಕಾರ ಮಾಡುತ್ತಾ ಅನೇಕಲ್ಲು ಪಟ್ಟಣದ ಬೀದಿಗಳಲ್ಲಿ ಹೋಗಿ, ಅಂಗಡಿ ಬೀದಿಗಳಲ್ಲಿ ಕೂತಿದ್ದ 20 ಜನರನ್ನು ಕರೆದುಕೊಂಡು ಬಂದರು. ನಾನು ಭಾಷಣ ಪ್ರಾರಂಭವಾಡಿದ ಮೇಲೆ ನೂರಾರು ಜನರು ಬಂದು ಸೇರಿದರು. ಯಾವ ಕಾಲದಲ್ಲಿ ಸಭೆಗೇ ಬರಲು ಜನರು ಹೆದರುತ್ತಿದ್ದರೋ ಅಂಥಕಾಲದಲ್ಲಿ ಕಾಂಗ್ರೆಸ್ಸಿಗೆ ಉತ್ತೇಜನ ಕೊಟ್ಟು, ಕಾಂಗ್ರೆಸ್ ಸಂಸ್ಥೆಗೆ ಬೆಂಬಲ ಕೊಟ್ಟು ಸಾಯುವ ತನಕ ಕಾಂಗ್ರೆಸ್ಸಿಗೆ ಸೇವೆಮಾಡಿ, ದೇಶಕ್ಕೇ ಅಪಾರವಾದ ಸೇವೆ ಮಾಡಿದ್ದಾರೆ. ದೇವರ ಕೊಂಡಪ್ಪನವರು. ಇಂಥ ವ್ಯಕ್ತಿ ಇವೊತ್ತಿನದಿನ ನಮ್ಮಿಂದ ಮರೆಯಾಗಿರುವುದು ನಮಗೆಲ್ಲರಿಗೂ ವ್ಯಸನಕರವಾದ ವಿಚಾರ. ಆದ್ದರಿಂದ ನಮ್ಮ ಸಭಾನಾಯಕರು ಹೇಳಿದ ಅಂಶವನ್ನು ಅನುಮೋದಿಸಿ, ದೇವರಕೊಂಡಪ್ಪನವರ ಕುಟುಂಬಪರಿವಾರದವರಿಗೆ ಈ ಸಭೆಯ ಅನುತಾಪವನ್ನು ತಾವು ಕಳುಹಿಸಬೇಕು ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು-ದಕ್ಷಿಣ).—ಅಧ್ಯಕ್ಷರೆ, ಈಗಾಗಲೇ ಹಲವು ಮಿತ್ರರು ದೇವರ ಕೊಂಡಪ್ಪನವರ ರಾಜಕೀಯ ಮತ್ತು ಸಾರ್ವಜನಿಕ ಜೀವನದ ವಿಷಯದಲ್ಲಿ ಹೇಳಿದ್ದಾರೆ. ಅವರು ನಮ್ಮ ಪಕ್ಕದ ತಾಲ್ಲೂಕಿನವರು; ನಾನು ಅವರ ಸಂಪರ್ಕವನ್ನು ಹತ್ತು ಹನ್ನೆರಡು ವರ್ಷಗಳಿಂದ ಇಟ್ಟುಕೊಂಡಿದ್ದೆ. ಅವರು ಕೇವಲ ತಾತ್ಕಾಲಿಕ ಪ್ರಯೋಜನವುಳ್ಳ ಯೋಜನೆಗಳನ್ನಿಟ್ಟುಕೊಂಡಿದ್ದವರಲ್ಲ. ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಬೇಕೆಂಬ ವಿಶಾಲ ದೃಷ್ಟಿಯಿಂದ ಬಹಳ ಶ್ರದ್ಧಾಸಕ್ತಿಗಳಿಂದ ಕೆಲಸ ಮಾಡಿದರು. ದೇಶವನ್ನು ಕಟ್ಟುವುದಕ್ಕೆ ಬೇಕಾದಷ್ಟು ಸತ್ಸಂಪ್ರದಾಯಗಳನ್ನು ಹಾಕಿಕೊಂಡು ಹೆಚ್ಚು ಹೆಚ್ಚು ಜನರನ್ನು ಪಕ್ಷಕ್ಕೆ ಸೇರಿಸಬೇಕೆಂದು ಎಲ್ಲರಿಗೂ ಪ್ರೋತ್ಸಾಹ ಕೊಡುತ್ತಿದ್ದರು. ಅವರ ನಾಯಕತ್ವದಲ್ಲಿ ಅವರ ಸಮಾರೋಚನೆಯನ್ನು ನಾನು ಅನೇಕಸಾರಿ ಪಡೆದಿದ್ದೇನೆ. ಅವರು ನಿಜವಾದ ಹಿರಿಯ ದೇಶ ಭಕ್ತಿಯಿಂದ ಕೂಡಿದ ವ್ಯಕ್ತಿಗಳು. ಅಷ್ಟೊಂದು ಹೆಚ್ಚಿನ ವಿದ್ಯಾವಂತರಲ್ಲದಿದ್ದರೂ ಎಷ್ಟೋ ವಿದ್ಯಾವಂತರಿಗಿಂತ ಮಿಗಿಲಾಗಿ ದೇಶದ ಸಮಸ್ಯೆಗಳನ್ನು ಯೋಚನೆಮಾಡಿ ಪರಿಹಾರ ಹೇಳುತ್ತಿದ್ದರು. ಇಂಥಾ ಒಳ್ಳೆಯ ವ್ಯಕ್ತಿ ಹೀಗೆ ನಮ್ಮನ್ನು ಬಿಟ್ಟು ಹೋಗಿರುವುದರಿಂದ ನಮ್ಮಂಥ ಯುವಕರಿಗೆ ಪ್ರೋತ್ಸಾಹ ಕೊಡುವವರಿಲ್ಲದಂತಾಗಿದೆ. ಈ ಸಮಯದಲ್ಲಿ ಅವರ ನಾಯಕತ್ವ, ಅವರು ಯುವಕರಿಗೆ ಕೊಡುತ್ತಿದ್ದ ಪ್ರೋತ್ಸಾಹ ಈ ಸದ್ಗುಣಗಳನ್ನು ನಾನು ನೆನೆದು ಕೊಂಡು ಅವರ ಕುಟುಂಬ ವರ್ಗದವರಿಗೆ ನನ್ನ ಸಂತಾಪವನ್ನು ಸೂಚಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು). ದಿವಂಗತ ದೇವರ ಕೊಂಡಪ್ಪನವರ ವಿಚಾರದಲ್ಲಿ ಅನೇಕ ಸ್ನೇಹಿತರೂ ಮತ್ತು ನಮ್ಮ ಮಿತ್ರರಾದ ಶ್ರೀಮಾನ್ ಇಮಾಂರವರೂ ವಿಶದವಾಗಿ ಹೇಳಿದ್ದಾರೆ. ದೇವರ ಕೊಂಡಪ್ಪನವರು ನುಮಾರು ಹದಿನೈದು ಇಪ್ಪತ್ತು ವರ್ಷಗಳಕಾಲ ದೇಶಕ್ಕಾಗಿ ದುಡಿದು ಸಲ್ಲಿಸಿರತಕ್ಕ ಸೇವೆ ಬಹಳ ಅನೋಘವಾಯುದು. ಅದರಲ್ಲಿಯೂ ಅವರು ಮಾತನಾಡಬೇಕಾದರೆ ಲೌಡ್ ಸ್ಪೀಕರೇ ಬೇಕಾಗಿರಲಿಲ್ಲ. ಬಹಳ ಘರ್ಜನೆಯ ಮನುಷ್ಯ, ಹುಲಿಯಂಥಾ ಮನುಷ್ಯ ಅವರು ಅನೇಕ ಸಾರಿ ಕಾಂಗ್ರೆಸ್ ಪಾರ್ಟಿ ಸಭೆ, ಎಂ. ಪಿ. ಸಿ. ಸಿ, ಎ. ಐ. ಸಿ. ಸಿ. ಮುಂತಾದ ಕಡೆ ಮಾತನಾಡಬೇಕಾಗಿದ್ದಾಗ ಅವರಿಗೆ ಲೌಡ್ ಸ್ಪೀಕರನ್ನೇ ಕೊಡುತ್ತಿರಲಿಲ್ಲ. ಕೊಟ್ಟರೆ ಎಲ್ಲಿ ಅದು ಒಡೆದು ಹೋಗುತ್ತಿತ್ತೋ ಎಂಬ ಭಾವನೆಯಿರುತ್ತಿತ್ತು. ಅಷ್ಟು ಧೈರ್ಯವಾಗಿ, ಧೀರ ಸ್ವರದಿಂದ ಮಾತನಾಡುತ್ತಿದ್ದ ಮನುಷ್ಯ ಅವರು. ಅವರು ಕಾಂಗ್ರೆಸ್ ಪಕ್ಷಕ್ಕೆ ಸದಸ್ಯರಾಗಿ ದೇಶಕ್ಕೆ ಅಪಾರವಾದ ತ್ಯಾಗ ಮತ್ತು ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಬಡವರಾಗಿದ್ದರೂ ಕೂಡ ತಮ್ಮ ಸುಖದ ಕಡೆ, ತಮ್ಮ ಸ್ವಾರ್ಥದ ಕಡೆ ಗಮನವಿಡದೆ ದೇಶದಲ್ಲಿ ಅದರಲ್ಲಿಯೂ ಹಳ್ಳಿಗಳಲ್ಲಿ ವಾಸ ಮಾಡುವ ಜನರ ಜೀವನವನ್ನು ಉತ್ತಮಪಡಿಸಬೇಕೆಂಬ ತೀವ್ರಾ ಸಕ್ತಿಯಿಂದ ದುಡಿಯುತ್ತಿದ್ದರು. ಕಾಂಗ್ರೆಸ್ ಪಾರ್ಟಿಯ ಸಭೆಯಲ್ಲಾಗಲಿ ಯಾವ ಸಭೆಯಲ್ಲಾಗಲಿ ಭರ್ಜರಿಯಾಗಿ ಘರ್ಜನೆಯಿಂದ ನಿಷ್ಕಲ್ಮಷವಾದ ಮನಸ್ಸಿನಿಂದ ಧೈರ್ಯವಾಗಿ ಮಾತನಾಡಿ, ಕೆಲಸಮಾಡಿ ದೇಶಕ್ಕಾಗಿ ದುಡಿಯುತ್ತಿದ್ದ ಮನುಷ್ಯ ಅವರು. ದೇಶ ಸೇವೆಯ ವಿಷಯದಲ್ಲಿ ಅವರು ಮಾಡಿರತಕ್ಕ ತ್ಯಾಗ ಮತ್ತು ನಿಷ್ಕಾಮ ಸೇವೆಯನ್ನು ನೋಡಿದರೆ, ದೇವರಕೊಂಡಪ್ಪನವರಿಗೆ ದೇಶ ಭಕ್ತರಲ್ಲಿ ಮೊದಲನೆಯ ಸ್ಥಾನ ಸಲ್ಲತಕ್ಕದೆಂದು ಹೇಳಿದರೆ ತಪ್ಪಲ್ಲ. ಅಂಥಾ ಮಹನೀಯರು ಕಣ್ಮರೆಯಾಗಿದ್ದಾರೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ನೀಡಿ, ಅವರ ಸಂಸಾರಕ್ಕೆ ಈ ದುಃಖವನ್ನು ಸಹಿಸಲು ಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸಿ ನನ್ನ ಸಂತಾಪವನ್ನು ಸೂಚಿಸುತ್ತೇನೆ.

1-30 P.M.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮಾನ್ ದೇವರ ಕೊಂಡಪ್ಪನವರನ್ನು 1932ನೆಯ ಸಾಲಿನಿಂದ

ಲೂ ನಾನು ಬಲ್ಲವನು. ಅತ್ತಿಬೆರೆ ಮತ್ತು ಸರ್ಜಾಪುರ ಈ ಸ್ಥಳಗಳಿಗೆ ನಾನು ಕಾಂಗ್ರೆಸ್ ಪ್ರಚಾರಮಾಡುವುದಕ್ಕೆ ಹೋಗಿದ್ದೆ. ಆ ಕಾಲದಲ್ಲಿ ನನಗೆ ಯಾರೂ ಬೆಂಬಲ ಕೊಡಲಿಲ್ಲ. ಆಂಥಾ ಕಾಲದಲ್ಲಿ ಶ್ರೀಮಾನ್ ದೇವರ ಕೊಂಡಪ್ಪನವರು ಅತ್ತಿಬೆರೆಗೆ ಬಂದು ನನ್ನ ಜೊತೆಗೆ ಸೇರಿ, ಕಾಂಗ್ರೆಸ್ಸಿಗೆ ಹೆಚ್ಚು ಬೆಂಬಲ ಕೊಡಬೇಕೆಂದು ಹೇಳಿ, ಹಳ್ಳಿ ಹಳ್ಳಿಗಳಿಗೆ ತಿರುಗಿ ಕಾಂಗ್ರೆಸ್ಸಿನ ನೀತಿ ಧರ್ಮಗಳನ್ನು ಎತ್ತಿ ಹಿಡಿದರು, ನನ್ನ ಜೊತೆಗೆ ಬಂದು. ಇವರು ಹೆಚ್ಚಿನ ವಿದ್ಯಾವಂತರಲ್ಲದಿದ್ದರೂ ಕೂಡ ರಾಜಕೀಯದಲ್ಲಿ ಅರಿತು ನುರಿತವರಾಗಿದ್ದರು. ಅನೇಕ ಸಂದರ್ಭಗಳಲ್ಲಿ ತಮ್ಮ ಬುದ್ಧಿ ಸಾಹಸವನ್ನು ತೋರಿಸಿ ಅನೇಕರನ್ನು ನಮ್ಮ ಕಡೆಗೆ ಬರುವಂತೆ ಮಾಡಿದರು. ಶ್ರೀಮಾನ್ ಚೆಂಗಲರಾಯರೆಡ್ಡಿಯವರು, ಶ್ರೀಮಾನ್ ಕೆ. ಹನುಮಂತಯ್ಯನವರು ಮತ್ತು ನಾವೆಲ್ಲ ಅನೇಕ ಕಲ್ಲಗೆ ಹೋದಾಗ ಅಲ್ಲಿನ ಜನರಿಗೆ ಪ್ರೋತ್ಸಾಹಕೊಟ್ಟು ಸಾವಿರಾರು ಜನರು ಕೂಡುವಂತೆ ಮಾಡಿ, ನಮ್ಮೆಲ್ಲರನ್ನೂ ಗಾಡಿ ಮೇಲೆ ಕೂರಿಪಿ ಉತ್ಸವ ಮಾಡಿದಾಗ, ಕೆಲವರು ಕಣ್ಣು ಕೆಂಪಗೆ ಮಾಡಿಕೊಳ್ಳಲು, ಅವರನ್ನು ಎದಿರಿಸಿದರು. ನಾನು ಮಾಡುವುದು ನ್ಯಾಯ, ಧರ್ಮ: ರಾಜಕೀಯ ಹೋರಾಟ ತಪ್ಪಲ್ಲ, ಸತ್ಯಕ್ಕಾಗಿ ಹೋರಾಡುತ್ತಿದ್ದೇನೆ, ಸತ್ಯಮಾರ್ಗದಲ್ಲಿ ಹೋಗುತ್ತಿದ್ದೇನೆ ಎಂದು ಧೈರ್ಯವಾಗಿ ಹೇಳಿದರು. ಆ ಸಂದರ್ಭದಲ್ಲಿ ಎತ್ತುಗಳನ್ನು ಕಟ್ಟುವುದಕ್ಕೆ ಕೆಲವರು ಮುಂದೆ ಬರಲಿಲ್ಲ. ಆಗ ನಾನೇ ನೊಗವನ್ನು ಹಿಡಿದುಕೊಂಡು ಗಾಡಿ ಎಳೆದುಕೊಂಡು ಹೋಗುತ್ತೇನೆ ಎಂದು ಹೇಳಿದರು. ಅಂಥಾ ವ್ಯಕ್ತಿಗಳು ಕಣ್ಮರೆಯಾಗಿರುವುದಕ್ಕಾಗಿ ನಮ್ಮೆಲ್ಲರಿಗೂ ಸಂಕಟವಾಗುತ್ತಿದೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಮತ್ತು ಈ ಅಪಾರ ದುಃಖವನ್ನು ಸಹಿಸಲು ಅವರ ಕುಟುಂಬಕ್ಕೆ ಶಕ್ತಿಯನ್ನು ಕರುಣಿಸಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ವಿ. ರಾಮರಾವ್ (ತುಮಕೂರು).—ಸ್ವಾಮಿ, ದಿವಂಗತರಾದ ದೇವರಕೊಂಡಪ್ಪನವರ ವಿಷಯದಲ್ಲಿ ಇದುವರೆಗೆ ಮಾನ್ಯ ಸದಸ್ಯರು ಹೇಳಿರುವ ಮಾತುಗಳನ್ನು ಕೇಳಿದ್ದೇನೆ. ನಾನು ಹೆಚ್ಚು ಹೇಳುವುದಕ್ಕೆ ಹೋಗದೆ, ಉಳಿದಿರುವ ಒಂದೇ ಒಂದು ವಿಷಯವನ್ನು ಹೇಳಲು ನಿಂತಿದ್ದೇನೆ. 1942ನೆಯ ಇಸವಿಯಲ್ಲಿ ಸೆಂಟ್ರಲ್ ಜೈಲಿನಲ್ಲಿ ನಾವೆಲ್ಲ ಕಾರಾಗೃಹವಾಸದಲ್ಲಿದ್ದ ಸಮಯದಲ್ಲಿ, ಜೈಲಿನ ಕೆಲವು ಅಧಿಕಾರಿಗಳ ಅಚಾತುರ್ಯದಿಂದ ಲಾರಿ ಧಾರ್ಜಾಯಿತು. ಆ ದಿವಸ ಬೆಳಿಗ್ಗೆ ಆರು ಘಂಟೆಯಾಗಿತ್ತು. ದೇವರ ಕೊಂಡಪ್ಪನವರು ನೀರಿನ ತೊಟ್ಟಿಯ ಬಳಿ ಆಗ ಸ್ನಾನ ಮಾಡುತ್ತಿದ್ದರು. ಅವರನ್ನು ನೋಡಿದ್ದವರಿಗೆಲ್ಲಾ ಗೊತ್ತಿರುವ ಹಾಗೆ, ಅವರು ಗರಡಿಸಾಧನೆ ಮಾಡಿ ಒಳ್ಳೆಯ ದೇಹ ದಾರ್ಢ್ಯ ಪಡೆದಿದ್ದರು. ಗಲಭೆ ನಡೆದ ಜಾಗಕ್ಕೂ ಅವರು ಸ್ನಾನ ಮಾಡುತ್ತಿದ್ದ ಜಾಗಕ್ಕೂ ನುಮಾರು ಒಂದು ಒಂದೂವರೆ ಫರ್ಲಾಂಗ್ ದೂರವಿತ್ತು. ಅವರ ಮೇಲೆ ಏನೂ ಅಸಮಾಧಾನವಿತ್ತೋ ಏನೋ, ಆ ಗಲಭೆ ನಡೆಯುತ್ತಿದ್ದ ಸ್ಥಳದಿಂದ ಅಧಿಕಾರಿಗಳು ಬಂದು ಸ್ನಾನ ಮಾಡುತ್ತಿದ್ದ ದೇವರ ಕೊಂಡಪ್ಪನವರ ಬೆನ್ನಿನ ಮೇಲೆ ದೊಣ್ಣೆಯಿಂದ ಎರಡು ಬಲವಾದ ಏಟುಗಳನ್ನು ಕೊಟ್ಟರು. ನನ್ನಂಥವನಿಗೆ ಅಂಥಾ ಏಟು ಬಿದ್ದಿದ್ದರೆ ನಾನು ನೆತ್ತೇ ಹೋಗುತ್ತಿದ್ದೆ. ಈ ರೌಡ್ ಸ್ವೀಕರಿನ ಕಂಬದಷ್ಟು ದಪ್ಪ ಬಾಸುಂಡೆ ಅವರ ಬೆನ್ನ ಮೇಲೆ ಊದಿಕೊಂಡು ಒಂದೆರಡು ದಿವಸಗಳವರೆಗೂ ಎದ್ದು ಕಾಣುತ್ತಿತ್ತು. ಆದರೂ ಕೂಡ ದೇವರಕೊಂಡಪ್ಪನವರು ತಮಗಾದ ನೋವನ್ನು ಮತ್ತೊಬ್ಬರಲ್ಲಿ ಹೇಳಿಕೊಳ್ಳಲಿಲ್ಲ. ಮಕ್ಕಳಿಗೆ ಬಿದ್ದ ಏಟಿಗಾಗಿ ಮರುಗುತ್ತಾ ಅವರ ಸಮಾಧಾನ ಮಾಡುವುದಕ್ಕೆ, ಅವರ ಶುಶ್ರೂಷೆ ಮಾಡುವುದಕ್ಕೆ ತೊಡಗಿದರು. ಅವರು ಗಟ್ಟಿಯಾಗಿ ಮಾತನಾಡುತ್ತಿದ್ದವರಷ್ಟೇ ಅಲ್ಲದೆ, ಅಷ್ಟೇ ದೇಹ ದಾರ್ಢ್ಯ ಮನೋ ದಾರ್ಢ್ಯ ಉಳ್ಳವರಾಗಿದ್ದರು. ಎಲ್ಲ ಅನ್ಯಾಯವನ್ನು ಕಂಡರೂ ಅದನ್ನು ಪ್ರತಿಭಟಿಸುತ್ತಿದ್ದರು. ಇಂಥ ಧೀರರನ್ನು ಕಳೆದುಕೊಂಡ ನಾವು ಎಷ್ಟುಸಂಕಟಪಟ್ಟರೂ ಸಾಲದು. ಅವರು ತಮ್ಮ ಸಂಸಾರವನ್ನು ಬಡತನದಲ್ಲಿ ಬಿಟ್ಟುಹೋಗಿದ್ದಾರೆ. ಇಂಥಾ ನಿಸ್ವಾರ್ಥ ಸೇವೆ ಮಾಡಿದ ವರನ್ನು ನೆನೆಸಿಕೊಂಡು ಕಣ್ಣೀರಿಡಬೇಕಾಗಿದೆ. ನಮ್ಮ ಈ ಸಭೆಯ ಅನುತಾಪವನ್ನು ಅವರ ಕುಟುಂಬದವರಿಗೆ ತಿಳಿಸಬೇಕೆಂದು ಸಭೆಯ ಪರವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ದಿವಂಗತ ದೇವರ ಕೊಂಡಪ್ಪನವರು ಅಪಾರವಾದ ದೇಶ ಮತ್ತು ದೇಶದ ಜನತೆಯ ಸೇವೆಯನ್ನು ಮಾಡಿ ಕೀರ್ತಿ ಶೇಷರಾಗಿದ್ದಾರೆ. ಇದರಿಂದ ಅವರು ನಿಜವಾಗಿಯೂ ಚಿರಸ್ಮರಣೀಯರು. ಸಭೆ ಸಲ್ಲಿಸುವ ಈ ಸಂತಾಪ ಸೂಚನೆಯಲ್ಲಿ ನಾನೂ ಭಾಗಿಯಾಗಿದ್ದೇನೆ. ಅವರ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ. ಈ ಸಂದರ್ಭದಲ್ಲಿ ಗೌರವ ಪೂರ್ವಕವಾಗಿ ಸಭೆ ಎದ್ದು ನಿಂತು ಎರಡು ನಿಮಿಷಗಳಕಾಲ ಮೌನದಿಂದಿರಬೇಕೆಂದು ಸೂಚಿಸುತ್ತೇನೆ.

(ಸದಸ್ಯರೆಲ್ಲರೂ ಎದ್ದು ನಿಂತು, ಎರಡು ನಿಮಿಷಗಳ ಕಾಲ ಮೌನದಿಂದಿದ್ದು ದಿವಂಗತರ ಆತ್ಮಕ್ಕೆ ಗೌರವವನ್ನು ಸೂಚಿಸಿದರು.)

Change in the Programme of Business.

Sri K. HANUMANTHAIYA (Chief Minister)—Sir, may I place a request before you and the House? In the agenda for the session, 21st is earmarked for Voting of Demands for Supplementary Grants and the next day for the debate on Food Situation and consideration of Levy System. The main problem that has to be discussed during this session is about the food policy. Government, in fact, are eagerly awaiting the opinions and the suggestions that are to be made on the floor of the House. I was very anxious to consult every party in this House so that the Government might be in a position to evolve a satisfactory system of procurement or levy or whatever is its name. I therefore request that this urgent question may be taken up tomorrow for discussion and the subject allotted for tomorrow be transferred to the day allotted for food debate.

Mr. SPEAKER.—I think the House has no objection; it may be done.

Hon'ble Members.—Yes.

Sri J. MOHAMED IMAM (Jagalur).—I want to know if the Government can give us any note on the food situation or what they intend doing. If they have any proposals..... .....

Mr. SPEAKER.—Before this evening or tomorrow evening ?

Sri J. MOHAMED IMAM.—Possibly before this evening. We may know on which line to proceed.

Sri K. HANUMANTHAIYA. — We have no set proposals and we have no set opinion. All that we are anxious to do is to gather the consensus of opinion here and implement that opinion. That is the earnestness with which I am approaching this question. A simple statement of fact may be made by the Hon'ble Food Minister tomorrow and in the light of those facts, Hon'ble Members are free to discuss. I thought that it would not be quite appropriate to come with a definite proposal or policy and compel the House with what is called 'party discipline' or 'brute majority', as very often they say. Therefore in order to welcome whatever suggestions Hon'ble Members may give, I have left the question open and free for discussion.

Sri J. MOHAMED IMAM.—The Hon'ble Chief Minister has announced once or twice that Government are seriously contemplating to introduce the levy system and they appointed a Committee also to examine this question. Perhaps this will be an important question which will come up for discussion. It will greatly facilitate our work if the Government will give us a copy of the report of that Committee and what their recommendations are. If possible whatever the Hon'ble Food Minister is going to state tomorrow, some of those proposals may be given to us, because we can concentrate on those points and offer our views instead of going at random and offering unnecessary and uncalled for views. That is why I said that if they can give us the recommendations of the Committee regarding the levy system and also what the proposals of the Government are, we will concentrate our attention on that important issue and we will be in a position to offer our views.

Sri K. HANUMANTHAIYA.—I have already stated that we have no scheme for placing before the House. May be that a private Committee was appointed and they have considered the question. What they have done will also be stated by the Hon'ble Minister for Food tomorrow. There is nothing for us to print and circulate so far as the House is concerned. As I said, we may consider the question impartially and dispassionately, with no pre-possessed views either on the part of Government or anybody.

Mr. SPEAKER.—In the reply to Question No. 175. There is a reference to a report of a Committee. That may be distributed.

Sri K. HANUMANTHAIYA.—Very well.

Mr. SPEAKER.—Excepting that, it is clear that there will be no notes to circulate and no motion, but a statement will be made by the concerned Minister at the very outset.

Sri J. MOHAMED IMAM.—Thank you very much.

Rules of Procedure and Conduct of Business in the Legislative Assembly.

Presentation of Report.

Sri R. CHANNIGARAMIAH (Koratagere—Madhugiri—Scheduled Castes).—Sir, I present the report of the Special Committee on the Rules of Procedure. Copies have already been distributed to Hon'ble Members.

Motion to consider.

Sri R. CHANNIGARAMIAH.—I move :

> "That the amendments to the Rules of Procedure and Conduct of Business in the Legislative Assembly, as reported by the Special Committee, be taken into consideration."

In this connection, I beg to say only a few words. The Special Committee have not made any vital alterations in the Rules of Procedure excepting some verbal changes. I hope the report has been circulated to Hon'ble Members and they are in possession of the

detailed recommendations of the Committee. So I hope the House will give consent to this report.

Mr. SPEAKER.—Motion moved :

"That the amendments to the Rules of Procedure and Conduct of Business in the Legislative Assembly, as reported by the Special Committee, be taken into consideration."

Janab J. MOHAMED IMAM (Jagalur).—Before proceeding to this, I would like to know what is the quota of Ministers between the Legislative Council and the Legislative Assembly. (Laughter)

Mr. SPEAKER.—You have one good representative here.

Janab J. MOHAMED IMAM.—Sir, I was one of the Members of the Special Committee and it was with deep regret that I had to enter a minute of dissent on one important point regarding the mode of election to the august places of the Speaker and the Deputy Speaker. My friend, Sri Channigaramiah, was pleased to say that the changes embodied herein are only verbal. It is not like that. If we take the entire Rules, the most important point to be considered is as to what should be the mode or system to be adopted while electing the Speaker and the Deputy Speaker. Sir, we are still in the beginning of democracy. We have to build up many traditions and we have to try experiments. Whatever measure we adopt or whatever step we take, we must be cautious and it must be such a one that it will not go against the spirit of democracy and that it will contribute for a successful working of democracy. During this period, if we find that a certain measure or a certain system has worked satisfactorily, then we must at all costs continue that system and that measure till we find that it does not work satisfactorily.

I am against trying experiments which in course of time may prove successful or may end in failure. It is sought to change the system of election which existed hitherto, Till now the Speaker and the Deputy Speaker were elected by the system of voting by ballot. We have participated in the election of three speakers till now. Each time, we employed a system of secret voting which has work d very satisfactorily. In June last, you were elected by secret ballot, and nobody complained that there was any defect in the system of voting. We were under the impression that this system, which has worked satisfactorily so far, would continue; but suddenly, it is sought to change the system of election which makes me nervous to accept at this stage. Sir, the only reason advanced is that in all Parliamentary proceedings and in all Parliamentary deliberations, the system of voting must be by a motion followed by an open division and that this system is in vogue in the English Parliament. It might be that in the British Parliamentary system this is in vogue. I have read the history of the Englsh Constitution. This system was adopted about 30 years ago. But in other democratic countries, the system of election is by ballot. In the American Republic—ours is an Indian Republic—the system of secret ballot is in vogue. We cannot isolate the single example of British Legislature and make it applicable to us. The conditions that are now prevailing in India are quite different from those in England. We have to build up traditions and establish conventions as in England. We are in the beginning of democracy. For example, the place of the Speaker is highly respected. It is a place reserved for a non-partisan. The Speaker is always a non-partisan. His place is rarely contested and he never identifies himself with any political party. He continues as the Speaker until he voluntarily resigns or retires. A Speaker, after retirement, never aspires for any political post. A person who is elected as Speaker has no contact with the previous administration or with the previous Government. These are the traditions which we have to apply, which we have to build. He is a Judge who has to do justice to all the members, irrespective of their party affiliation. Every Member of this House should have confidence in him. Let me make it clear, Sir, I am not making any personal reference, but

(JANAB J. MOHAMED IMAM).

I am speaking on the principle that every Speaker should enjoy perfect confidence. If the Speaker belongs to a political party and if he is elected by party majority, it creates suspicion in the minds of the members of other parties. It is quite necessary that the Speaker should be a non-partisan.

Sri R. CHANNIGARAMIAH.—That is not the subject before us, Sir. I am standing on a point of order. The subject before us is the Report of the Special Committee in connection with the election of the Speaker.

Sri J. MOHAMED IMAM.—My point is that this system should not be taken into consideration.

Mr. SPEAKER.—He is stating that the election of the Speaker should be by a ballot rather than by a division.

Sri J. MOHAMED IMAM.—The Speaker of the British House of Commons is non-partisan while the Speaker at present here is not a non-partisan. He is a party man. Even after his election he belongs to the Congress. He takes part in the party deliberations.

Mr. SPEAKER.—What is the system prevailing in Delhi?

Sri J. MOHAMED IMAM.—The procedure there must be changed.

Secondly, Sir, there is another danger. At the time of election, two candidates are proposed by rival parties by a motion for the acceptance of the House and both those candidates become subjects of discussion. If the Congress Party sets up a candidate that party speaks about his merits, and achievements and so on, while the members on the Opposite side decry him and try to pull him down.

Sri A. BHEEMAPPA NAIK.—Decrying or speaking about merits and demerits even while proposing the name where is it proposed?

Sri J. MOHAMED IMAM.—It is there.

Mr. SPEAKER.—When there is a motion, he is entitled to speak about the candidates.

Sri J. MOHAMED IMAM.—The election of candidates would be a subject for discussion and every Member can speak regarding the merits and demerits. This is a very dangerous practice and it will lead to many complications. Sir, I must point out that in our country elections are not yet regarded as impersonal. Elections have led to many dissensions and complications. So when two Hon'ble Members stand before this House and if Members of each party are keen to select their own candidate, it will be very unsafe and the candidates will be exposed to the greatest danger possible. That is why in England they take care to avoid all embarrassment by avoiding elections.

Sri A. G. RAMACHANDRA RAO (Minister for Law and Education).—Recently there was a contest in the party.

Sri J. MOHAMED IMAM.—I want to point out that the secrecy of voting is a very sacred trust. We should not dispose it of or set it aside if we find that it works satisfactorily. What is voting and how should the Members of this House vote when they are in the House? The definition of voting is 'recording the expression of one's own will according to one's conscience.' So, when a certain gentleman votes, he is expected to vote according to his conscience free from any external influence and not according to any mandate that will be given to him. That is why the secret system of voting is introduced so that there may be fair election and free voting. But on the other hand, if you change it to an open system of voting, if you do away with the secrecy of voting, what is the result? There will not be fair and free election. Every person, whether he believes in a particular candidate or not, will have to obey the mandate of the party. And while voting or lifting up his hand, he has to look at his party whip or leader of the party. The eyes of the leader of the party will always be vigilant on that person. The very object of the system of voting is defeated. This system of voting is nothing but a compulsion to vote according to party mandate. But inside the House, such a thing cannot be accepted. That is why the system of voting is very sacred; it must be respected and it must be followed in

future also. We elect members from the Legislature to the Senate, to the Public Accounts Committee, to the Privileges Committee and to other various committees, by the system of secret voting by ballot. We have not changed it. So, Sir, I submit that we are still in the beginning of democracy, we have to build up many traditions, and unless we build up those traditions we cannot adopt this open system of voting. This will cause embarrassment not only to the candidate but also to the Members of this House. We have not found any mistake in the present system of voting. Let any Member point out any defect. There is every justification for continuing it till we find that it is not working properly.

2 P.M.

Sri A. BHEEMAPPA NAIK I heard my Hon'ble friend, the Leader of the Opposition, with rapt attention, just to know whether he is making out a good point in support of his note of dissent. After all, I found that he admitted, as the Hon'ble Speaker rightly pointed out, that it is about the best and the most honourable method of voting.

Sri J. MOHAMED IMAM.—On a point of information. I do not think I ever said that this system of voting is better than that one.

Sri A. BHEEMAPPA NAIK.—All right. Your arguments were tantamount to that. In any case, if according to him, a secret ballot alone would ensure safety, that only means that the man who is voting is not sure of his ground, that he is afraid or that there are coercions. It is only on these grounds that one should be convinced. When a Member can speak in the open House that a certain thing is not to his taste, and can oppose any measure that the Government or the majority party brings, when he can oppose that, can he not similarly oppose here in the open House? I do not understand why. (Interruption). Democracy always functions on party decision. We have inculcated in the mind of the people that we follow a uniform policy on the basis of which we form a Government and see that the State is administered in accordance with that policy. If party mandate is to be made use of in the election of the Speaker, I do not see any reason why it should not be. If it is a majority party, it is a majority decision; why should there be a secret? Is it just to induce or dissuade members that you are advocating this? My friend says that in America there is a system. He did not read out or point out to me that there is such a system. (Interruption) Anyway, he has been saying that he can point out; but he has not, during his speech, pointed out any such system whatever it is; and I do not admit that we are in any way inferior to England or to any other country to-day. My friend said "It is just a beginning of democracy." After 70 or 80 years of responsive system of Government being administered here in Mysore—my friend was once saying that this is a responsive system of Government—one cannot say democracy is just beginning here. We have been educated in the system of democracy for the last 60 or 70 years. The Representative Assembly is the representation of the very democracy', he was saying all these years. To-day he says "We have just begun." I cannot understand the argument that my friend advances in saying that we have just begun democracy and he says that, ultimately democracy is the system of openly making statements without fear or favour of anybody. If that is the case, let us without fear or favour of anybody vote openly. What does it matter? The secret system only comes in when there is absolute necessity. At this stage, in any case in Mysore, there is no such necessity. While arguing, my friend was saying that the Speakers' seat is not contested. Contrary is the case here. Though they put up one Socialist candidate.....

Sri Mulka GOVINDA REDDY.—(Chitaldrug)—On a point of order. We never put up the Socialist candidate last time for the Speaker's place as a Socialist candidate but as an Opposition candidate. Sri Bheemappa Naik should correct himself.

Sri A. BHEEMAPPA NAIK.—It is not a point of order. Leave alone the Socialist Party; even the Opposition

(SRI A. BHEEMAPPA NAIK).

knew that it would receive a defeat, whether openly or secretly, but still they set up a candidate.

Sri Mulka GOVINDA REDDY.—That is democracy.

Sri A. BHEEMAPPA NAIK.—Will they think of the convention?

Sri Mulka GOVINDA REDDY.—That is democracy.

Sri A. BHEEMAPPA NAIK.—That is why I am saying that Democracy is this open voting.

Sri M. SHANKAR LINGE GOWDA.—(Nagamangala)—What is the system in America?

Sri A. BHEEMAPPA NAIK.—He must only know. I do not know. It is he who thought of America. I am only thinking of India, of the Indian Parliament. I am thinking of the best democratic system. I have never read any big book. I have never written books. I never said that this is economics. I do not know anything about that. I am a man with common-sense. I say that an open voting is the best.

Sri Mulka GOVINDA REDDY.—Question.

Sri A. BHEEMAPPA NAIK.—Because he is a learned man, he has written so many books, he might know. I am saying that conventions could be built up really if my friends had only thought of this before putting up a candidate. Then they said: "Opposition, Democracy, formal opposition we shall show" and all that. Similarly now, we shall also say that open voting is about the best. Supposing in a party system we give a direction, a mandate and say 'You must all vote for us.' and some of you build up opposition and set up a candidate to-morrow. You also vote openly. What does it matter? That there should be one way for one thing and a different way for another thing, is not correct. Moreover, your party were there. You did not object to the Legislative Council taking up certain procedure in the election of the Chairman.

Sri S. SRINIVASA IYENGAR (T.-Narsipur)—It is not our opposition.

Sr A. BHEEMAPPA NAIK.—I am not answerable for that. There is a system in the Upper House. It is prevailing. A similar system we wanted here. Let there be uniformity.

Sri L. SIDDAPPA (Channagiri).—We will request them to adopt our policy.

Sri A. BHEEMAPPA NAIK.—We are also requesting them to adopt our policy; if they intend by change theirs, We are also thinking of uniform policy in India. The Parliament has adopted a certain policy. The Upper House has adopted a certain policy. So we said we shall adopt the same policy. We shall adopt a uniform policy in unison with the policy adopted in India.

Sri J. MOHAMED IMAM.—On a point of information. Is it a fact that the Committee set up by the Legislative Council have recommended the retention of the system of secret ballot?

Mr. SPEAKER.—I do not know.

Sri A. BHEEMAPPA NAIK.—Anyway we do not know anything about that. One thing is: division and then decision. The division may be either secretly or openly. That is all the difference. Even in village Panchayets, my friend knew, when members were elected, there was an open voting, open lifting of hands. Nothing happened there.

Sri J. MOHAMED IMAM.—So many factions and breaking of heads.

Sri A. BHEEMAPPA NAIK.—But still the system was there when my friend was Minister. In the village panchayet, there is the system of open voting and you tolerate it, but you say here that it is not correct. Does that argument hold good?

Sri L. SIDDAPPA.—You say that nothing has happened. You know of Harihar's murder case.

Sri A. BHEEMAPPA NAIK.—The law has taken its course. Now they are suffering. There is only one case since the Village Panchayets Act was introduced. Even in a system of secret ballot, in spite of knowing that we are in a majority, something happens. Whether it be a system of secret ballot or not, it is possible for people to know whether a man has voted this way or that way by the counting of votes, at least when the whole thing is over. So

after all, this system of open voting is better, more honourable and more honest. Let us openly know who is our Speaker. We cannot be more honourable if we cannot openly vote.

Sri L. SIDDAPPA.—Shall we adopt that policy in regard to general election?

Sri A. BHEEMAPPA NAIK.—We shall consider that aspect when it comes. It is done in general election for village panchayets. Every one knows.....

Sri B. HUTCHE GOWDA.—You follow village panchayets.

Sri A. BHEEMAPPA NAIK.—If my friend Sri Hutche Gowda wants to have a chance, the Speaker is sure to give him a chance. You can then argue and convince us. We have been more honourable; we have not been heckling just as four of you are doing.

Mr. SPEAKER.—You please argue on the merits of the case.

Sri A BHEEMAPPA NAIK.—I say that the present system proposed by the Committee is about the best system; open voting by the lifting of hands is about the best. The argument that my friend, the Leader of the Opposition advances does not hold water and we must have this system of voting at least in the election of the Speaker.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ ಬಿಲ್ಲು ಸಭೆಯ ಮುಂದೆ ಇತ್ತು, ಈಗ ಅದು ಪರ್ಯಾಲೋಚನೆಗೆ ಬಂದಿದೆ. ಅದರಲ್ಲಿ ನಾನು ಸಂಪೂರ್ಣವಾಗಿ ನಮ್ಮ ಪಾರ್ಟಿ ಲೀಡರುಗಳು ಹೇಳಿರತಕ್ಕ ಅಂಶವನ್ನು ಪುಷ್ಟೀಕರಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಶ್ರೀಮಾನ್ ಭೀಮಪ್ಪನಾಯಕರು ಬಹಳ ಬರುಸಿಂದ ಇದರ ವಿಚಾರವಾಗಿ ಮಾತನಾಡಿದರು. ಆದರೆ ಅಷ್ಟು ಹೇಳಿದರೂ ಕೂಡ ಅವರ ಮಾತು ನನಗೆ ಕನ್‌ವಿನ್ಸ್ ಆಗಲಿಲ್ಲ. ಏಕೆಂದರೆ ಅವರು ಮುಂಚೆ 'ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಬಹಳ ವರ್ಷಗಳಿಂದ ಇದೆ, ನಾವು ವಿಲೇಜು ಪಂಚಾಯಿತಿಗಳನ್ನು ಅನುಸರಣೆ ಮಾಡೋಣ' ಎಂದು ಹೇಳಿದರು. ಅದೇ ಉಸಿರಿನಲ್ಲೇ ಅವರು ವತ್ತೊಮ್ಮೆ 'ನಾವು ಇಲ್ಲಿನವರೆಗೂ ಪ್ರಜಾಪ್ರಭುತ್ವವನ್ನು ಸ್ಥಾಪನೆಮಾಡಬೇಕೆಂದು ಬಹಳಮಟ್ಟಿನ ಹೋರಾಟ ನಡೆಸಿದ್ದೇವೆ' ಅದು ಈಗತಾನೇ ಫಲಸಿದೆ ಎಂದು ಹೇಳಿದರು.

ಹೀಗೆ ಒಂದುಸಾರಿ 70 ವರ್ಷಗಳ ಅನುಭವ ಇದೆ ಎಂದು ಹೇಳಿದು, ಇನ್ನೊಂದುಸಾರಿ ಪ್ರಜಾಪ್ರಭುತ್ವ ಸ್ಥಾಪನೆಗೆ ಹೋರಾಟ ಮಾಡಿದ್ದೇವೆಂಬುದು ಒಂದಕ್ಕೊಂದಕ್ಕೆ ವ್ಯತಿರಿಕ್ತವಾಗಿದೆ. ಹಾಗೆ ಒಂದುವೇಳೆ ಅವರಿಗೆ 70 ವರ್ಷಗಳಿಂದಲೂ ಪ್ರಜಾಪ್ರಭುತ್ವವನ್ನು ನಡೆಸಿ ಸಂಪೂರ್ಣ ಅನುಭವ ಇದೆ ಎಂದ ಮೇಲೆ, ಈಗ ಈ ಮೋಷನ್‌ನನ್ನು ಏಕೆ ತಂದಿದ್ದಾರೆ? ನಮಗೆ ಪ್ರಜಾಪ್ರಭುತ್ವದಲ್ಲಿ ಅಧ್ಯಕ್ಷರನ್ನು ಚುನಾಯಿಸುವ ಅಧಿಕಾರ ಬಂತು. ಆಗಿನಿಂದಲೂ ಯಾವ ತತ್ವವನ್ನು ನಾವು ಅನುಸರಿಸುತ್ತಿದ್ದೇವೆಯೋ, ಯಾವ ಪದ್ಧತಿಯನ್ನು ಅನುಸರಿಸುತ್ತಿದ್ದೇವೆಯೋ ಅದು ಚೆನ್ನಾಗಿ ಕಲಸಮಾಡಿದೆ. ಯಾವ ಆಕ್ಷೇಪಣೆಯೂ ಇಲ್ಲ. ಹೀಗಿರುವಲ್ಲಿ ಈಗ ಏಕಾ ಏಕಿ ಇದು ಬರುವುದಕ್ಕೆ ಕಾರಣ ಏನು ಎಂದು ಯೋಚನೆ ಮಾಡಿದರೆ, ನನಗೆ ಒಂದು ಕಾರಣ ಗೊತ್ತಾಗುತ್ತದೆ. ಮೊನ್ನೆ ಬೆಂಗಳೂರು ಸಿಟಿಯಲ್ಲಿ ಮೇಯರ್ ಎಲೆಕ್ಷನ್ನಲ್ಲಿ ಆದ ಫಲಿತಾಂಶ ಅವರ ಮನಸ್ಸಿನ ಮೇಲೆ ಒಂದು ಪರಿಣಾಮವನ್ನುಂಟುಮಾಡಿದೆ. ಆ ಕೂಡಲೆ ಇದು ಹೊಳೆಯಿತು ಎಂದು ತೋರುತ್ತದೆ.

Sri R. CHANNIGA RAMIAH.—ಅದನ್ನೆಲ್ಲಾ ಹೇಳಬೇಕಾದ್ದಿಲ್ಲ.

ಶ್ರೀ ಜೆ. ಮಹಮದ್ ಇಮಾಂ.—ನನಗೆ ಗೊತ್ತಿಲ್ಲ. ಏನಾಯ್ತು ಅಲ್ಲಿ!

ಶ್ರೀ ಬಿ. ಹುಚ್ಚೇಗೌಡ.—ಸೀಕ್ರೆಟ್ ಬಾರೆಟ್ ಏರ್ಪಡಿಸಿದ್ದಾಗ ಮೆಂಬರುಗಳು ತಮತಮಗೆ ಯಾರು ಯೋಗ್ಯರು ಎಂದು ಕಂಡುಬಂದರೋ ಅವರಿಗೆ ಓಟು ಕೊಟ್ಟುಬಿಟ್ಟರು.

Sri R. CHANNIGARAMIAH.—I do not think it is permissible for the member to refer to those things.

Sri MULKA GOVINDA REDDY.—Common sense seems to have dawned on members.

Sri R. CHANNIGA RAMIAH.—We have to discuss on merits of the subject. The member may only say that the system is not good. He may argue on that point.

Sri B. HUTCHE GOWDA.—On the analogy of the Village Panchayets' practice, I am comparing the system of voting.

Sri R. CHANNIGARAMIAH.—But it will not help us.

ಶ್ರೀ ಬಿ. ಹುಚ್ಚೇಗೌಡ.—ಆದ್ದರಿಂದ ಯಾವಾಗಲೂ ಮೊದಲು ನಾವು ಯಾವ ಪದ್ಧತಿ ಸರಿಯಾಗಿದೆಯೆಂಬುದನ್ನು ಗಮನಿಸಿ ಆಚರಣೆಗೆ ತರುವುದು ನಮ್ಮ ಕರ್ತವ್ಯ. ಸೀಕ್ರೆಟ್ ಬ್ಯಾಲೆಟ್ ಪದ್ಧತಿಯಲ್ಲಿ ಕೆಡಕು ಇದ್ದರೆ ಹೇಳಿ, ಅದರಲ್ಲಿ ಪಾರ್ಟಿ ಎಂಬುದು ಬರುವುದಿಲ್ಲ. ಚುನಾವಣೆ ಮಾಡುವುದರಲ್ಲಿ ಕೆಲವು ಸ್ವತಂತ್ರ ಪಕ್ಷದವರು ಓಟು ಕೊಡುವವರು ಇರಬಹುದು. ಅವರು ಮುಖದಾಕ್ಷಿಣ್ಯದ ಮೇಲೆ ಓಟು ಕೊಡಬೇಕಾದ ಸಂದರ್ಭ ಬರತ್ತದೆ. ಇದೆಲ್ಲದರ ಕಾರಣದಿಂದ Secret Ballot ಇರುವುದು ಒಳ್ಳೆಯದು. ಇನ್ನೊಂದು ಏನೆಂದರೆ, show of hands ಇಟ್ಟುಕೊಳ್ಳುವುದು. ಇಬ್ಬರು ಉಮೇದುವಾರರಲ್ಲದೆ ಮೂರು ನಾಲ್ಕು ಜನರು ನಿಂತುಕೊಂಡರೆ ಹೆಚ್ಚು ತೊಂದರೆ ಇದೆ. ಆದ್ದರಿಂದ ಈಗಿರುವುದೇ ಸರಿಯಾಗಿದೆ. ಈಗ ಬದಲಾವಣೆ ಮಾಡುವುದರಿಂದ ನಮ್ಮ ರಾಜಕೀಯ ಪ್ರಗತಿಯಲ್ಲಿ ಒಂದು ಹೆಜ್ಜೆ ಹಿಂದೆ ಹೋದ ಹಾಗಾಗುತ್ತದೆಂದು ನನ್ನ ಅಭಿಪ್ರಾಯ. ಆದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ಎಂ. ಶಂಕರಲಿಂಗೇಗೌಡ (ನಾಗಮಂಗಲ).—ಸ್ವಾಮಿ ಸ್ಪೀಕರನ್ನು ಚುನಾವಣೆ ಮಾಡತಕ್ಕದ್ದು ಅಮೇರಿಕಾರೀತಿ ಇರಬೇಕು, ಬ್ರಿಟಿಷ್‌ರೀತಿ ಇರಬೇಕು, ಎಂದು ಬಿಟ್ಟರು! ಆದರೆ ಮಾತ್ರ ಅಮೇರಿಕಾದಲ್ಲಿ ಯಾವರೀತಿ ನಡೆಯುತ್ತದೆಂದು ಒಬ್ಬರೂ ಹೇಳಲಿಲ್ಲ.

ಶ್ರೀ ಜೆ. ಮಹಮದ್ ಇಮಾಂ—ನಾನು ಹೇಳಿದೆ Secret Ballot ಪದ್ಧತಿ ಮೇಲೆ ನಡೆಯುತ್ತಿದೆ ಎಂದು.

ಶ್ರೀ ಎಂ. ಶಂಕರಲಿಂಗೇಗೌಡ.—ಹಾಗೆಯೇ ಬ್ರಿಟಿಷ್ ನ್ನಲ್ಲೂ ಯಾವರೀತಿ ನಡೆಯುತ್ತದೆಂದು ಅವರೂ ಕೂಡ ಹೇಳಲಿಲ್ಲ. ಹೆಚ್ಚು ಒತ್ತಿ ಒತ್ತಿ ಕೇಳಿದ್ದರಲ್ಲ ಶಂಕರ ಲಿಂಗೇಗೌಡರಿಗೆ ಗೊತ್ತಿದೆ ನಾನೇನೂ ಹೇಳಬೇ ಕಾಗಿಲ್ಲವೆಂದು ಹೇಳಿ ಮೆತ್ತಗೆ ಜಾರಿಕೊಂಡರು. ಅದೂ ಹೋಗಲಿ. Speaker ಅಂದರೆ ಸ್ಥಾನ ಯಾವರೀತಿ ಇದೆ ಎಂದರೆ, ಅವರು ಮೆಂಬರುಗಳಲ್ಲ ಯಾವ ವಿಧವಾದ ಪಾರ್ಟಿಯನ್ನೂ ವಹಿಸಿಕೊಳ್ಳದೆ ಒಂದು ತೀರ್ಮಾನ ವನ್ನು ಹೊಂದಿದ್ದಾರೆ. ಮತ್ತು ಸಭೆಯನ್ನು ಹತೋಟಿ ಯಲ್ಲಡುವ ಅಧಿಕಾರ ಅವರಿಗಿದೆ. ಈಗ ನಮ್ಮ ದೇಶ ದಲ್ಲಿ ನಡೆಯತಕ್ಕದ್ದು ಯಾವರೀತಿಯಲ್ಲದೆ ಎಂದರೆ, ಒಬ್ಬ Speaker ಅನ್ನು ನೇಮಕಮಾಡಿಕೊಳ್ಳಬೇಕಾದರೆ ಪಾರ್ಟಿಯವರು ಮೊದಲೇ ತಮ್ಮ ಪಾರ್ಟಿಯಿಂದ ಒಬ್ಬ ರನ್ನು ಗೊತ್ತುಮಾಡಿಕೊಳ್ಳುತ್ತಾರೆ. ಅವರು ಚುನಾ ವಣೆ ಆಗುತ್ತಾರೆ. ಅಂಥ ಅಧ್ಯಕ್ಷರು ಯಾವುದಾದರೂ ಕಷ್ಟಕಾಲ ಬಂದಾಗ ಪಾರ್ಟಿ Mandate ನಂತೆ ತಿರು ಗುತ್ತಾರೆಯೇ ಏನಾ ಬೇರೆ ಯಾವಕಡೆ ಹೇಗೆ ತಿರುಗು ತ್ತಾರೆ? ಇದು ಒಂದು ತೊಂದರೆ. ಇದಕ್ಕೆ ಅವರು ಹೇಳುವುದು ಏನೆಂದರೆ Speaker ಎಂದು ಮಾಡಿಬಿಟ್ಟ ಮೇಲೆ ಅವರು ಪಕ್ಷಾತೀತರು, ಅವರು ಎಂದೂ ಹಾಗೆ ಮಾಡುವುದಿಲ್ಲ ಎಂದು. ಒಂದುವೇಳೆ ಅಧ್ಯಕ್ಷರು ಹಾಗೆಯೇ ತಿಳಿದುಕೊಂಡು ಬೇರೆರೀತಿ ನಡೆದುಕೊಂಡರೆ, ನಾಳೆಯೇ ಅವರನ್ನು ಕೆಳಗೆ ಎಳೆದು ಬಿಡುತ್ತಾರೆ.

Sri R. CHANNIGARAMIAH.—I rise to clarify the position.

Sri M. SHANKARLINGE GOWDA.—I am not going to yield.

Sri R. CHANNIGARAMIAH.—I am requesting the Speaker.

Sri M. SHANKARLINGE GOWDA.—Is it a point of order? If it is not, I am standing; you better sit down.

Sri R. CHANNIGARAMIAH.—You are not the Speaker. I am requesting the Chair to allow me to speak.

Sri M. SHANKARLINGE GOWDA.—Till then, I will be standing.

Sri J. MOHAMED IMAM.—I rise to a point of order. When the Member has not yielded, the other member has no right to speak.

Mr. SPEAKER.—He has now yielded.

ಶ್ರೀ ಆರ್. ಚೆನ್ನಿಗರಾಮಯ್ಯ.—ಶ್ರೀ ಶಂಕರಲಿಂಗೇಗೌಡರು ಹೇಳಿದ್ದು: ಪಾರ್ಟಿ ಪರವಾಗಿ ಒಬ್ಬ ಉಮೇದುವಾರರನ್ನು ಅಧ್ಯಕ್ಷಸ್ಥಾನಕ್ಕೆ ನಿಲ್ಲಿಸಿ ಚುನಾಯಿತರಾದರೆ ಅವರು ಯಾವಾಗಲೂ ಪಾರ್ಟಿ ಪರವಾಗಿಯೇ ಇರುತ್ತಾರೆ, ಪಾರ್ಟಿ ಪರವಾಗಿಯೇ ತೀರ್ಮಾನಕೊಡುತ್ತಾರೆ, ಒಂದುವೇಳೆ ಹಾಗೆ ಮಾಡ ದಿದ್ದರೆ ಪಾರ್ಟಿ Mandate ಗೆ ವಿರೋಧ, ಅವರು ಕೆಳಗೆ ಎಳೆದುಬಿಡುತ್ತಾರೆ. ಎಂದು ಅಂಥ ಅನುಮಾನಕ್ಕೆ ಅವಕಾಶವಿಲ್ಲ. ಏಕೆಂದರೆ, ಇವೊತ್ತಿನ ದಿವಸ ಪಾರ್ಟಿ ಪರವಾಗಿ ಚುನಾಯಿತರಾಗಿದ್ದರೂ, ಅಧ್ಯಕ್ಷರು ಯಾವ ಪಕ್ಷವನ್ನೂ ವಹಿಸದೆ ತೀರ್ಮಾನಗಳನ್ನು ಎಷ್ಟು ನ್ಯಾಯ ವಾಗಿ ಕೊಡುತ್ತಿದ್ದಾರೆಂಬುದನ್ನು ಈ ಸಭೆಯವರೇ ಒಪ್ಪಿದ್ದಾರೆ. ಆದ್ದರಿಂದ ಅಂಥಾ ಅನುಮಾನಕ್ಕೆ ಅವ ಕಾಶವಿಲ್ಲ. ಮುಂದೆಯೂ ಹಾಗೆ ಅನುಮಾನಿಸಬೇಕಾದು ದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಶಂಕರಲಿಂಗೇಗೌಡ.—ಅನುಮಾನಪಡ ಬೇಕಾದುದ್ದಿಲ್ಲವೆಂದು Deputy Speaker ಹೇಳಿ ಬಿಟ್ಟರೆ ನಾನು ಹೇಗೆ ನಂಬಿಕೊಳ್ಳಲಿ! ನನ್ನ ಮನಸ್ಸಿಗೆ ಭಯ ಇದ್ದೇ ಇದೆ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆರೀತಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದ ಕ್ಕಾಗುವುದಿಲ್ಲ. ಇದಕ್ಕಾಗಿ ಅಮೇರಿಕಾ ದೇಶದಲ್ಲಿ Speakerನ್ನು ಯಾವರೀತಿ ಚುನಾವಣೆ ಮಾಡಿಕೊಳ್ಳು ತ್ತಾರೆಂಬುದನ್ನು ನಾನು ಈಗ ಹೇಳುತ್ತೇನೆ. ಅವರು ಏನು ಮಾಡುತ್ತಾರೆಂದರೆ, ಎಲ್ಲಾ ಪಾರ್ಟಿಯವರನ್ನೂ ಮಾಂಚೆಯೇ ಸೇರಿಸಿಕೊಂಡು ಆವೊತ್ತಿನ ದಿವಸ ಯಾರನ್ನು Speaker ಆಗಿ ಚುನಾವಣೆ ಮಾಡೋಣ ಎಂದು ಕೇಳುತ್ತಾರೆ.

ಶ್ರೀ ಎ. ಭೀಮಪ್ಪನಾಯಕ.—ಹಾಗೆ ಅದು ಎಲ್ಲ ಹೇಳಿದೆ! ಬಾಯಲ್ಲಿ ಹೇಳಿಬಿಟ್ಟರೆ! ಎಲ್ಲಯಾದರೂ ಇದ್ದರೆ ಓದಿಹೇಳಿ.

ಶ್ರೀ ಎಂ. ಶಂಕರಲಿಂಗೇಗೌಡ.—ಆ ಪುಸ್ತಕ ಹಿಗ್ಗಿನ್ ಬಾಥಮ್ಸ್ ನಲ್ಲದೆ. 25 ಡಾಲರ್ ಆಗು ತ್ತದೆ. ದುಡ್ಡಿದ್ದರೆ ಕೊಡಿ, ತೆಗೆದುಕೊಂಡು ಬಂದು ಕೊಡುತ್ತೇನೆ. ಹಾಗಿಲ್ಲದೆ ನಿಮ್ಮಲ್ಲ ಬುಕ್ಕು ಇಲ್ಲದಿದ್ದು ಮೇಲೆ ನಾನು ಹೇಳುವುದನ್ನು ಕೇಳಬೇಕು.

Mr. SPEAKER.—You have got four minutes more.

ಶ್ರೀ ಎಂ. ಶಂಕರಲಿಂಗೇಗೌಡ.—ಇದು ಮುಖ್ಯ ವಾದ ಪ್ರಶ್ನೆ. ನಿಮಿಷಗಳ ಮೇಲೆ ಹೋಗುವುದಲ್ಲ. ಅವರವರಿಗೆ ತಿಳಿದದ್ದನ್ನು ಪೂರ್ತಿಯಾಗಿ ಹೇಳುವುದಕ್ಕೆ ಅವಕಾಶಕೊಟ್ಟರೆ ಬಹಳ ಪ್ರಯೋಜನವಾಗುತ್ತದೆ.

Mr. SPEAKER.—If the Hon'ble Member would be relevant, I can grant any amount of time.

Sri M. SHANKARLINGE GOWDA.—I will be always relevant, Mr. Speaker.

Mr. SPEAKER.—Not by chit chatting with some other Members. That is not the way of arguing. The Member may convince the party and they will yield.

ಶ್ರೀ ಎಂ. ಶಂಕರಲಿಂಗೇಗೌಡ.—ಅಮೆರಿಕಾ ದೇಶದಲ್ಲಿ ಪಾರ್ಟಿ ಪದ್ಧತಿ ಇದ್ದರೂ ನಾನು ಹೇಳಿದಂತೆ ಒಂದು ದಿವಸ ಎಲ್ಲಾ ಪಾರ್ಟಿಗಳವರನ್ನೂ ಕರೆಸಿ ಯಾರನ್ನು Speaker ಆಗಿ ಚುನಾವಣೆ ಮಾಡೋಣ ಎಂದು ಸಮಾಲೋಚನೆ ಮಾಡುತ್ತಾರೆ. ಅದೇ ರೀತಿ ಯಾಗಿ ನಾವು ಇಲ್ಲ ಅಧ್ಯಕ್ಷರನ್ನು ಚುನಾವಣೆ ಮಾಡು ವಾಗ ಎಲ್ಲಾ ಪಾರ್ಟಿಗಳನ್ನೂ ಕರೆಸಿ ಕೇಳಿ ಮಾಡಿದರೆ ಎಲ್ಲಾ ತಂಟೆಯೂ ಹರಿದುಹೋಗುತ್ತದೆ. ಅದಿಲ್ಲದೆ ಗುಟ್ಟಿನಲ್ಲ ಏನೋ ಮಾಡಿಕೊಂಡರೆ, ಪಿಕ್ಕ ಪಾರ್ಟಿಗಳ ವರೂ ತಮಗೆ ಇಷ್ಟ ಬಂದಂತೆ ಕೊಡಬೇಕೆನ್ನುತ್ತಾರೆ. ಆದ್ದರಿಂದ secret ballot ಇದ್ದರೆ ಅವರಿಗೆ ಒಳ್ಳೆ ಯದು. ಹಾಗಿಲ್ಲದೆ open ballot ಆದರೆ ಪಾರ್ಟಿ mandate ಪ್ರಕಾರವೇ ಹೋಗಬೇಕಾಗುತ್ತದೆ. ಈ ದೃಷ್ಟಿಯಿಂದ secret ballot ವಿಚಾರದಲ್ಲಿ ನನ

ಮಾನ್ಯ ಸ್ನೇಹಿತರು ಕೊಟ್ಟರತಕ್ಕ Dissent Note ತಪ್ಪೆಂದು ಹೇಳುವುದಕ್ಕಾಗುವುದಿಲ್ಲ.

ಅಲ್ಲದೆ ಇನ್ನೂ ಒಂದು ವಿಷಯ. ಈಗ ನಾವು ಈ ಸಭೆಗೆ ಎಲ್ಲರೂ secret ballot ನಿಂದಲೇ ಬಂದಿದ್ದೇವೆ. ಹೀಗಿರುವಾಗ ಅದೇ ರೀತಿ speaker ನ್ನೂ, secret ballot ಮೂಲಕ ಏಕೆ ಚುನಾವಣೆ ಮಾಡಕೂಡದು? ನಮ್ಮನ್ನು ಚುನಾಯಿಸುವಾಗ secret ballot ಇರಬೇಕೆಂದು ಮಾತ್ರ ಹೇಳಿದರೆ ಅದರಲ್ಲಿ ಯಾವ ನೀತಿ ಇದೆ! ಇದು ಸರಿ ಹೋಗುವುದಿಲ್ಲ. ಯಾವಾಗ ಹಿಂದೆ governors ಗಳನ್ನು ಚುನಾವಣೆ ಮಾಡಬೇಕೆಂದು ಭಾರತ ರಾಜ್ಯಾಂಗದಲ್ಲಿ ನಮೂದು ಮಾಡಿದ್ದನ್ನು ತೆಗೆದುಹಾಕಿ, ಏನಾದರೂ ಅನ್ಯಾಯ ನಡೆದು ಹೋಗಿ ವಿರೋಧಕ್ಕೆ ಅವಕಾಶವಾಗಬಹುದೆಂದು ಹೆದರಿ governorsಗಳನ್ನು ನೇಮಕಮಾಡುವ ಅಧಿಕಾರವನ್ನು ಇಟ್ಟುಕೊಂಡರೋ ಅದೇ ರೀತಿ ನಮಗೂ ಇಲ್ಲಿ ನ್ಯಾಯ ತೀರ್ಮಾನ ದೊರೆಯಬೇಕಾದರೆ, ಈ ಸ್ಥಾನಕ್ಕೂ ರಾಜಪ್ರಮುಖರೇ ಒಬ್ಬರನ್ನು ನೇಮಕ ಮಾಡುವ ರೀತಿ ಮಾಡಿದರೆ ಒಳ್ಳೆಯದು. ಅವರು ಯಾವ ಪಾರ್ಟಿಯವರನ್ನಾದರೂ ನೇಮಕಮಾಡಲಿ. ಹಾಗಿಲ್ಲದೆ ಯಾವುದೋ ಒಂದು ಪಂಗಡದಿಂದ ಒಬ್ಬರನ್ನು ಪಾರ್ಟಿ ಮಾಂಡೇಟ್ ಪ್ರಕಾರ open ballot ನಲ್ಲಿ ಅಧ್ಯಕ್ಷರಾಗಿ ಚುನಾವಣೆ ಮಾಡಿ ಎಲ್ಲರಿಗೂ ಚೆನ್ನಾಗಿರಬೇಕೆಂದು ಹೇಳಲು ಸಾಧ್ಯವೆ? ಎಷ್ಟು ಕಷ್ಟ. ಅವರಿಗೆ ಇರುತ್ತದೆ? ಹಾಗಿಲ್ಲದೆ secret ballot ಇಟ್ಟುಕೊಂಡಿದ್ದರೆ, ಅವರ (ಇತರರ) ಕಡೆಯಿಂದಲೂ ತನಗೆ ಓಟು ಬಂತು ಎಂಬ ಅಭಿಮಾನ ಅವರಿಗೆ ಇರುತ್ತದೆ. ಆದ್ದರಿಂದ ಶ್ರೀ ಇಮಾಂ ರವರು ಹೇಳಿದಹಾಗೆ secret ballot ಎಂಬುದು ಬಹಳ ಒಳ್ಳೆಯದು. ಎಂದು ಅವರ ಪಾರ್ಟಿಗೆ ನಾನು ಸೇರದೆ ಹೋದರೂ ಕೂಡ, ತತ್ವಕ್ಕಾಗಿ ಒಪ್ಪಿ ನಾನು ಇದನ್ನು ವಿರೋಧಿಸುತ್ತೇನೆ.

2-30 P.M.

Mr. SPEAKER.—You are telling the House that the Speaker in America is a non-party man?

Sri M. SHANKARLINGE GOWDA.—Yes.

Mr. SPEAKER.—It is not so.

